# ಕರಾವಳಿ ತರಂಗಿಣಿ

ಕಡಲ ಕಿನಾರೆಯಿಂದ ಕೆಂಪು ಕೋಟೆಯವರೆಗೆ..

ಕನ್ನಡ ವಾರಪತ್ರಿಕೆ

**ಸುಭಾಷಿತ:**

ಶಾಂತಿ ನೆಮ್ಮದಿ ಇಲ್ಲವೆಂದು ಕೊರಗಬೇಡ
ಆತ್ಮತೃಪ್ತಿಯ ಕೆಲಸ ಮಾಡಿ ಪಡೆದುಕೋ ಅದನ್ನ..
ರೂಪ ಸೌಂದರ್ಯಕೆ ಮರುಳಾಗಿ ಚಿಂತಿಸಬೇಡ
ನಿನ್ನ ಅಂತರಾಳದಲ್ಲಿ ರೂಪಿಸಿಕೋ ಅದನ್ನ..
ಪರರ ಆಸ್ತಿ ಸಂಪತ್ತು ನೋಡಿ ಸಸಗಿಲ್ಲವೆನ್ನಬೇಡ
ನ್ಯಾಯಮಾರ್ಗದಲ್ಲಿ ನಡೆದು ಸಂಪಾದಿಸಿಕೋ ಅದನ್ನ..
ನೀನೇ ತಪ್ಪು ಮಾಡಿ ಪರರಿಗೆ ಕೈ ತೋರಿಸಬೇಡ
ಏಟು ತಿನ್ನುವ ಮುನ್ನ ಸರಿಪಡಿಸಿಕೋ ಅದನ್ನ..
ಅಧಿಕಾರಕ್ಕಾಗಿ ಎಂದಿಗೂ ಹಾತೊರೆಯಲೇಬೇಡ
ಕಾಲಬಲ ಬರುವ ಹಾಗೆ ಸೃಷ್ಟಿಸಿಕೋ ಅದನ್ನ..

**ಭಗವಾನ್ ಶ್ರೀಕೃಷ್ಣ**

REGD NO: 1327299/KARKAN/2018/26532 www.karavalitharangini.com KARAVALI THARANGINI KANNADA Weekly Mangaluru ದಿನಾಂಕ: 03-01-2025 to 09-01-2025 ಬೆಲೆ: 7-00 ಸಂಪುಟ–4 ಸಂಚಿಕೆ–28 ಪುಟಗಳು–6

ಕ್ಷಣ ಕ್ಷಣದ ಸುದ್ದಿಗಳಿಗಾಗಿ
ಕರಾವಳಿ ತರಂಗಿಣಿ
ಪತ್ರಿಕಾ ಬಳಗದಿಂದ
ಅಂತರ್ಜಾಲ ಮಾಧ್ಯಮ

www.karavalitharangini.com
ಕರಾವಳಿ ತರಂಗಿಣಿ
ಮಂಗಳೂರು







ಪ್ರದಾನಿ ನರೇಂದ್ರ ಮೋದಿಯವರು "ಸೂರ್ಯ ಝುರ್" ಯೋಜನೆಯನ್ನು ಘೋಷಿಸಿರುವುದು ಎಲ್ಲರಿಗೂ ತಿಳಿದಿರುವ ಸಂಗತಿ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಿಸಿಲಿಗೆ ಯಾವ ಕೊರತೆಯೂ ಕಂಡು ಬರುವುದಿಲ್ಲ. ಮಳೆಗಾಲದಲ್ಲಿಯೂ ಬಿಸಿಲ ಝುಲಕ್ಕೆ ಸಾಕಪ್ಪ ಎನ್ನುವಂತಾಗುವುದು ಇದೆ. ಹಾಗಿರುವಾಗ ದಕ್ಷಿಣ ಕನ್ನಡದಲ್ಲಿ ಈ ಯೋಜನೆ ಕನಿಷ್ಠ ವರ್ಷದ 10 ತಿಂಗಳು ಫಲಕಾರಿಯಾಗಬಲ್ಲದು. ಮನೆಯ ಟೆರೆಸಿನಲ್ಲಿ, ಜಮೀನುಗಳಲ್ಲಿ ಪ್ಯಾನೆಲ್ ಅಲವಡಿಸಿದರೆ ಒಂದು ಕಡೆ ಮನೆಯ ವಿದ್ಯುತ್ತಿನ ಖರ್ಚು ಉಳಿಯುತ್ತದೆ. ಹೆಚ್ಚಿನ ವಿದ್ಯುತ್ ಸಂಗ್ರಹಣೆ ಅಥವಾ ಮಾರಾಟಕ್ಕೂ ಅವಕಾಶವಿದೆ. ಅಷ್ಟೇ ಅಲ್ಲದೆ ಸೂರ್ಯ ಘರ್ ಯೋಜನೆಯಡಿಯಲ್ಲಿ ಸಹಾಯಧನವು ಲಭಿಸುತ್ತದೆ.

## ರಾಜೀನಾಮೆ ಪಡೆಯಲು ಬ್ಯಾಟರಿ ಇಲ್ಲ –ಕಾಮತ್




**ಮಂಗಳೂರು:** ಪ್ರಿಯಾಂಕ್ ಖರ್ಗೆ ಅವರ ರಾಜೀನಾಮೆ ಪಡೆದುಕೊಳ್ಳುವುದಕ್ಕೆ ಸಿದ್ದರಾಮಯ್ಯ ಮತ್ತು ಡಿ ಕೆ ಶಿವಕುಮಾರ್ ಅವರಿಗೆ ಬ್ಯಾಟರಿ ಇಲ್ಲ ಎಂದು ಮಂಗಳೂರು ದಕ್ಷಿಣದ ಶಾಸಕ ವೇದವ್ಯಾಸ ಕಾಮತ್ ವ್ಯಂಗ್ಯವಾಡಿದ್ದಾರೆ. ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದಲೂ ಗುತ್ತಿಗೆದಾರರು ಅತ್ಯಂತ ಆತಂಕದ ಸ್ಥಿತಿ ಎದುರಿಸುತ್ತಿದ್ದಾರೆ. ಆರ್ಥಿಕ ಸಂಕಷ್ಟಕ್ಕೆ ಸಿಲುಕಿ ನಲುಗಿ ಹೋಗಿದ್ದಾರೆ. ಸಾಲದಕ್ಕೆ ಸರ್ಕಾರದ ಕೃಪಾ ಕಟಾಕ್ಷ ಹೊಂದಿರುವ ಪ್ರಭಾವಿ **3ನೇ ಪುಟಕ್ಕೆ**

## ನಕಲಿ ಚಿನ್ನ ಹಗರಣ: ಸಿಬ್ಬಂದಿಗಳು ಬಲಿ ಕಾ ಬಕ್ರಾ..?

**ಮಂಗಳೂರು:** ಅಮ್ಮೆಂಬಳ ಬಾಳಪ್ಪನವರ ದೂರದೃಷ್ಟಿಯಲ್ಲಿ ಅತೀ ಹಿಂದುಳಿದ ಸಮೂದಾಯಗಳಲ್ಲಿ ಒಂದಾದ ಕುಲಾಲ ಸಮುದಾಯಕ್ಕೆ ಸಹಕಾರಿ ಆಗಲಿ ಎಂದು ಕಟ್ಟಿ ಬೆಳೆಸಿದ ಬಂಟ್ವಾಳದ ಸಮಾಜ ಸೇವಾ ಸಹಕಾರಿ ಸಂಘ ನಿಯಮಿತದ ಪಡೀಲು ಶಾಖೆಯಲ್ಲಿ ನಕಲಿ ಚಿನ್ನವಿಟ್ಟು 2ಕೋಟಿ ರೂ.ಗಳಿಗೂ ಅಧಿಕ ಸಾಲ ಪಡೆದ ವಂಚನೆ ಪ್ರಕರಣದಲ್ಲಿ ನಿಯಮಾನುಸಾರ ಬಾಕಿಯನ್ನು ಸಂಪೂರ್ಣವಾಗಿ ವಸೂಲಾತಿ ಮಾಡಲಾಗಿದೆ ಎಂದು ಸಂಘದ ಆಡಳಿತ ಮಂಡಳಿಯ ಪರವಾಗಿ ಪ್ರಧಾನ ವ್ಯವಸ್ಥಾಪಕ ಬೋಜ ಮೂಲ್ಯ ತಿಳಿಸಿದ್ದಾರೆ. ವಿಶೇಷ ಎಂದರೆ ಯಾವುದೇ ಸಹಕಾರ ಸಂಘಗಳ ಸಾಧನೆಯನ್ನು ತಿಳಿಸಲು ಮಾಡುವ ಪತ್ರಿಕಾಗೋಷ್ಠಿಯಲ್ಲಿ ಆಡಳಿತ ಮಂಡಳಿಯ ಅಧ್ಯಕ್ಷರು, ಸದಸ್ಯರು ಇರುವುದು ಸಹಜ. ಆದರೆ ಇಂದು ನಗರದ ಪತ್ರಿಕಾಭವನದಲ್ಲಿ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಸಮಾಜ ಸೇವಾ ಸಹಕಾರಿ **3ನೇ ಪುಟಕ್ಕೆ**



## ಬಿಜೆಪಿ ಹೆಣದ ಮೇಲೆ ರಾಜಕೀಯ ಮಾಡುತ್ತಿದೆ –ಭಂಡಾರಿ

**ಮಂಗಳೂರು:** "ಗುತ್ತಿಗೆದಾರ ಸಚಿನ್ ಆತ್ಮಹತ್ಯೆ ಪ್ರಕರಣವನ್ನು ಪ್ರಿಯಾಂಕ್ ಖರ್ಗೆ ಅವರ ತಲೆಗೆ ಕಟ್ಟಲು ಬಿಜೆಪಿ ಯತ್ನ ಮಾಡುತ್ತಿದೆ. ಅಮಿತ್ ಷಾ ಅಂಬೇಡ್ಕರ್ ಕುರಿತ ಹೇಳಿಕೆಯ ವಿವಾದವನ್ನು ಡೈವರ್ಟ್ ಮಾಡಲು ಬಿಜೆಪಿ ಪ್ರಯತ್ನ ಮಾಡುತ್ತಿದೆ. ಈ ಮೂಲಕ ಬಿಜೆಪಿ ಮತ್ತೊಮ್ಮೆ ಹೆಣದ ಮೇಲೆ ರಾಜಕೀಯ ಮಾಡುತ್ತಿರುವುದು ಸ್ಪಷ್ಟವಾಗುತ್ತಿದೆ" ಎಂದು ವಿಧಾನ ಪರಿಷತ್ ಶಾಸಕ ಕೆಪಿಸಿಸಿ ಕಾರ್ಯಾಧ್ಯಕ್ಷ ಮಂಜುನಾಥ ಭಂಡಾರಿ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಬಿಜೆಪಿ ಸರ್ಕಾರದ ಹಗರಣಗಳನ್ನು ಬಯಲಿಗೆಳೆಯುವ ಮೂಲಕ ಅವರಿಗೆ ಅತ್ಯಂತ ಅಪಾಯಕಾರಿಯಾಗಿ **3ನೇ ಪುಟಕ್ಕೆ**








# ಸಂಪ್ರದಾಯ

## ಡೊಳ್ಳು ಕುಣಿತ



ಜನಪದ ಕಲೆಗಳಲ್ಲಿ ಗಂಡುಕಲೆ ಎನಿಸಿರುವ ಡೊಳ್ಳು ಕುಣಿತ ಪುರುಷರಿಗೆ ಮೀಸಲಾದ ಕಲೆ. ಆದರೆ ಇಂದು ಮಹಿಳೆಯರು ಕೂಡ ಡೊಳ್ಳು ಕುಣಿತದಲ್ಲಿ ಭಾಗಿಯಾಗುತ್ತಿದ್ದಾರೆ. ಉತ್ತರ ಕರ್ನಾಟಕದ ಬಹುಪಾಲು ಜಿಲ್ಲೆಗಳು ಹಾಗೂ ಚಿತ್ರದುರ್ಗ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಪ್ರಚಲಿತವಿರುವ ಡೊಳ್ಳು ಕುಣಿತ ತನ್ನ ವಿಶಿಷ್ಟ ವಾದ ನೃತ್ಯ ಶೈಲಿಗಳಿಂದ ಉಳಿದುಕೊಂಡು ಬಂದಿದೆ. ಡೊಳ್ಳಿನ ಹಿಂದೆ ಒಂದು ಕತೆ ಇದೆ. ಡೊಳ್ಳಾಸುರನೆಂಬ ರಕ್ಕಸ ತಪಸ್ಸಿನಿಂದ ಪರಶಿವ ನನ್ನು ಮೆಚ್ಚಿಸಿ ಪರಶಿವನು ತನ್ನ ಹೊಟ್ಟೆಯಲ್ಲಿ ನೆಲೆಸಬೇಕೆಂದು ವರಪಡೆದ. ಅದರಿಂದ ಶಿವನು ಗಂಗೆ, ಗೌರಿಯನ್ನು ಅತ ತೊರೆದು ರಕ್ಕಸನ ಹೊಟ್ಟೆಯನ್ನು ಸೇರಿದ. ಶಿವನಿಲ್ಲದ ಕೈಲಾಸ ಕಳೆಗುಂದಿತು. ದುಃಖಿತರಾದ ಶಿವಗಣ ಗಳು ವಿಷ್ಣುವಿನ ಮೊರೆಹೊಕ್ಕರು ವಿಷ್ಣುವಿನ ರಹಸ್ಯ ನಿರ್ದೇಶನದಂತೆ ಪಂಚ ರಾತ್ರಿಗಳು ಸೇರುವುದು. ಶಿವನು ಕೋಪದಿಂದ ಕಣ್ಣು ತೆರೆದರೆ ಪ್ರಳಯವೆ ಉಂಟಾಗುವುದೆಂದು ಅರಿ ತ ವಿಷ್ಣು ಡೊಳ್ಳಾಸುರನ ಹೊಟ್ಟೆಯನ್ನೆ ವಾದ್ಯವಿ ಶೇಷವಾಗಿ ಮಾಡಿಕೊಂಡು ಅವನ ಮೂಳೆಗ ಳಿಂದ ಡೊಳ್ಳು ಬಾರಿಸಲು ಆರಂಬಿಸಿದ. ಶಿವ ನು ಆ ವಾದ್ಯದ ದನಿಗೆ ಮಾರು ಹೋಗಿ ಲಾಸ್ಯದಲ್ಲಿ ತೊಡಗಿದ. ಈ ವೇಳೆಗೆ ತೊಡೆಯ ಗೌರಿ, ಜೆಡೆಯ ಗಂಗೆಯರು ಬಂದು ಶಿವನನ್ನು ಸೇರಿದರು. ಶಿವ ಸುಪ್ರಿತನಾದ. ಮುಂದೆ ಡೊ ಳ್ಳು ಶಿವಸ್ತುತಿಯ ವಿಶೇಷ ವಾದ್ಯವಾಯಿತು. ಡೊಳ್ಳು ಮರ ಮತ್ತು ಚರ್ಮದಿಂದ ಮಾಡಿದ ಒಂದು ದೊಡ್ಡ ಆಕಾರದ ವಾದ್ಯ ಎನ್ನಬಹು ದು. ತಾಳೆ ಅಥವಾ ಹಗುರವಾದ ಮರದಿಂದ ಎರಡುವರೆ ಇಂದ ಮೂರುವರೆ ಅಡಿ ಉದ್ದದ ಹಾಗೂ ಎರಡು ಅಡಿ ವ್ಯಾಸವಿರುವ ಪಿಪಾಯಿ ಆಕಾರದ ಡೊಳ್ಳನ್ನು ಸಿದ್ದಪಡಿಸಿರುತ್ತಾರೆ. ಇದರ ಎಡಬಾಗಕ್ಕೆ ಆಡಿನ ಚರ್ಮವನ್ನು ಬಲ ಬಾಕ್ಕೆ ಕುರಿಯ ಚರ್ಮವನ್ನು ಬಿಗಿಯಾಗಿ ಬಿಗಿಯುತ್ತಾರೆ. ಬಳಿಕ ಡೊಳ್ಳುನ್ನು ಬಡಿಯಲು ಬಳಸುವುದು ಸುಮಾರು ಒಂದುವರೆ ಅಡಿ ಉದ್ದದ ಬಿದಿರು ಕೋಲು. ಇದಕ್ಕೆ 'ಗಣಿ' ಎಂದು ಕರೆಯುತ್ತಾರೆ. ಡೊಳ್ಳು ಕುಣಿತದ ತಂ ಡದಲ್ಲಿ ಸಾಮಾನ್ಯವಾಗಿ ನಾಲ್ಕು ಜನರಿರುತ್ತಾರೆ ಕೆಲವು ಬಾರಿ ಇಷ್ಟೆ ಜನರಿರಬೇಕು ಎಂಬ ನಿಯಮವಿಲ್ಲ.

# ಸಂಪಾದಕೀಯ

ಕರಾವಳಿ ತರಂಗಿಣಿ

## ಕೆಸರೊಳು ತಾವರೆ ಪುಟ್ಟಲು...

- ಲಲಿತಶ್ರೀ ಪ್ರೀತಮ್ ರೈ



ತಲ್ಲಣಿಸದಿರು ಕಂಡ್ಯ ತಾಳು ಮನವೆ ಎಲ್ಲರನು ಸಲಹುವನು ಇದಕೆ ಸಂಶಯಬೇಡ" ಈ ನುಡಿಮುತ್ತುಗಳಲ್ಲಿ ಅದೆಂತಹ ಮಧುರಾಮೃತವಿದೆಯಲ್ಲವೇ? ಜಗದ ಜಂಜಾಟದಲ್ಲಿ ಸ್ವಾರ್ಥ ಲಾಲಸೆಗಳಲ್ಲಿ ಮನಸ್ಸು ಬೆಂಡಾಗಿ ಸಾಕೆನ್ನುವ ಸಮಯದಲ್ಲಿ ನಮ್ಮನ್ನು ಕಾಯುವವನೊಬ್ಬನಿದ್ದಾನೆ ಎಂದರೆ ಆ ಹೊತ್ತಿಗೆ ಮನಸ್ಸು ತುಂಬಿ ಬರದೇ ಇರಲು ಸಾಧ್ಯವೇ? ನಾನು ನಾನೆಂದು ಮೆರೆಯುವ ಜನರೆದುರು ನಾವು ನಾವಾಗಿಯೇ ಬದುಕಿ ತೋರಿಸಬೇಕೆಂಬ ಹಂಬಲವಿದ್ದರೂ, ಅದು ಸಾಧ್ಯವಾಗದೇ ಒದ್ದಾಡುವ ಜನರು ಅದೆಷ್ಟಿಲ್ಲ ಈ ಭೂಮಿಯಲ್ಲಿ. ಅಂತಹ ಜನರಿಗಾಗಿಯೇ ನಮ್ಮ ಹಿರಿಯರು ಇಂತಹ ನುಡಿ ಮುತ್ತುಗಳ ಮೂಲಕ ಸಂತೈಸಿರಬೇಕು. ನಾನು, ನನ್ನದು ಎಂಬ ಅಭಿಮಾನಕ್ಕೆ ಕಾರಣವಾದುದೇ ಅಹಂಕಾರ. ದೇಹವೇ ನಾನೆಂಬ ಭಾವ ಇರುವವರೆಗೆ ಈ ಅಹಂಕಾರವು ನಮ್ಮಲ್ಲಿ ಮನೆಮಾಡಿಕೊಂಡಿರುತ್ತದೆ. 'ಅಹಂಕಾರವೆಂಬ ಮದಗಜವೇರಿ ವಿಧಿಗೆ ಗುರಿಯಾಗಿ ನೀವು ಹೋದಿರಲ್ಲಾ' ಎಂದು ಬಸವಣ್ಣನವರು ಅಹಂಕಾರವನ್ನು 'ಮದವೇರಿದ ಆನೆ ಇದ್ದ ಹಾಗೆ' ಎನ್ನುತ್ತಾರೆ. ಅಹಂಕಾರದಲ್ಲಿ ಮೆರೆಯುವವರಿಗೆ ಎಂದೆಂದಿಗೂ ಮನ:ಶಾಂತಿ ಇರಲಾರದು. ತಾನು ಸುಖವಾಗಿ ಇರುವೆ ನೆಂದು ಈ ಜಗಕ್ಕೆ ಕೂಗಿ ಹೇಳಿದರೂ, ಅವರು ಎಂದೆಂದಿಗೂ ಮನಸ್ಸಿನಲ್ಲಿ ದ್ವೇಷ, ಅಸೂಯೆ ಎನ್ನುವ ಕಿಚ್ಚನ್ನು ಹೊತ್ತು ತಿರುಗುತಿರುತ್ತಾರೆ. ಅಂತವರು ಅವರದೇ ಒಡಲಲ್ಲಿ ಬಚ್ಚಿಟ್ಟಿರುವ ಕಿಚ್ಚಿನ ಬೇಗೆ ಯಲ್ಲಿ ಬೆಂದು ನೊಂದಿರುವುದಂತು ಖಂಡಿತ. ಆದರೂ ನಾನು ಎನ್ನುವ ಅಹಂಕಾರ ಅವರನ್ನು ಸರಿ ದಾರಿಯಲ್ಲಿ ನಡೆಯಲು ಬಿಡುವುದಿಲ್ಲ. "ಆ ಬಿರುಗಾಳಿ ಹುಟ್ಟಲೊಡನೆ ಜ್ಞಾನಜ್ಯೋತಿ ಕೆಟ್ಟಿತ್ತು. ಜ್ಞಾನಜ್ಯೋತಿ ಕೆಡಲೊಡನೆ ನಾ ಬಲ್ಲೆ ಬಲ್ಲಿದರೆಂಬ ಅರುಹಿರಿಯರೆಲ್ಲರೂ ತಾಮಸಕ್ಕೊಳಗಾಗಿ ಸೀಮೆ ದಪ್ಪಿ ಕೆಟ್ಟರು ಕಾಣಾ ಗುಹೇಶ್ವರಾ' ಎಂಬ ಅಲ್ಲಮಪ್ರಭುವಿನ ವಚನದಲ್ಲಿ ನಾನೆಂಬ ಅಹಂಕಾರದ ಬಗ್ಗೆ ತುಂಬಾ ಚೆನ್ನಾಗಿ ತಿಳಿಸಿದ್ದಾರೆ. ಅಹಂಕಾರವುಳ್ಳವರು ಆಸೆ-ಆಮಿಷ, ಕಾಮ-ಕ್ರೋಧ ಮತ್ತು ಮದ-ಮತ್ಸರಗಳಿಗೆ ಬಲಿಯಾಗಿ ತಮ್ಮ ವಿವೇಕವನ್ನೇ ಕಳೆದುಕೊಳ್ಳುತ್ತಾರೆ. ಮಹಾನ್ ಜ್ಞಾನಿಗಳೇ ಅಹಂಕಾರದಿಂದ ಅಧಃಪತನ ಹೊಂದಿರುವಾಗ ಸಾಮಾನ್ಯರ ಪಾಡಂತೂ ಹೇಳತೀರದು. ಅಹಂಕಾರದಲ್ಲಿ ಮೆರೆದ ರಾಜ ಮಹಾರಾಜರೇ ಮಣ್ಣಲ್ಲಿ ಮಣ್ಣಾಗಿರುವುದನ್ನು ನಾವು ಇತಿಹಾಸದಲ್ಲಿ ಓದಿದ್ದೇವೆ. ಇನ್ನು ಇನ್ನೊಬ್ಬರ ಬಗ್ಗೆ ಕಿಡಿಕಾರುತ್ತಾ, ಇನ್ನೊಬ್ಬರನ್ನು ಕೆಟ್ಟ ದೃಷ್ಟಿಯಲ್ಲೇ ನೋಡುವ ಈ ತೃಣ ಸಮಾನರಾದ ನಾವೆಲ್ಲ. ನಮ್ಮ ಅಮ್ಮ ಯಾವಾಗಲೂ ಒಂದು ಮಾತು ಹೇಳುತ್ತಿದ್ದರು "ಮರದ ಹುಳು ಯಾವಾಗಲೂ ಹೇಗೆ ಮರವನ್ನೇ ತಿನ್ನುತ್ತದೋ ಹಾಗೇ ಮನುಷ್ಯನಲ್ಲಿರುವ ಮದ ಮತ್ಸರಗಳು ಅವರನ್ನೇ ಹಾಳು ಮಾಡುವುದರಲ್ಲಿ ಸಂದೇಹವಿಲ್ಲ" ಅಂತ. ಅಹಂಕಾರವು ಮನಸ್ಸನ್ನು ಆವರಿಸಿದಾಗ ಭಗವಂತನು ನಮ್ಮ ಮನಸಿನಿಂದ ನಮಗರಿವಿಲ್ಲದಂತೆ ದೂರ ಹೋಗುತ್ತಾನೆ. ಅಹಂಕಾರವಿಲ್ಲದ ಶುದ್ಧ ಮನಸ್ಸು ತಾನೆ ಶಿವಲಿಂಗವೆನಿಸಿಕೊಳ್ಳುವುದರಲ್ಲಿ ಸಂಶಯವಿಲ್ಲ. ಅಂತಹ ಶುದ್ಧ ಮನಸ್ಸಿನಲ್ಲಿ ಮಾತ್ರ ಭಗವಂತನು ನೆಲೆಯಾಗುವುದಕ್ಕೆ ಸಾಧ್ಯ. ಆದ್ದರಿಂದಲೇ 'ಅಹಂಕಾರಿಯಾಗದೇ ಶರಣೆನ್ನು ಮನವೆ' ಎಂದು ಬಸವಣ್ಣನವರು ಮನಸ್ಸಿಗೆ ತಿಳಿ ಹೇಳುತ್ತಾರೆ. ಇನ್ನು ಜಾತಿ, ಆಸ್ತಿ, ಅಂತಸ್ತುಗಳಿಂದ ಮೆರೆಯುವ ನಾವು ಸಾಧಿಸಿದ್ದಾದರೂ ಏನನ್ನು? ದಿನವೆಲ್ಲಾ ಕೂಲಿ ಮಾಡಿ ದಣಿದು ಮಲಗುವ ಒಬ್ಬ ಕೂಲಿಯವನಿಗೆ ಬರುವ ನಿದ್ದೆಯ ಸುಖ, ಕೊಪ್ಪರಿಗೆ ಮೇಲೆ ಮಲಗುವ ಒಬ್ಬ ಶ್ರೀಮಂತನಿಗೆ ಸಿಗಲು ಸಾಧ್ಯವೇ? ಇನ್ನು ಜಾತಿ ಜಾತಿ ಎಂದು ಬಡಿದುಕೊಳ್ಳು ಈ ಸಮಾಜದಲ್ಲಿ ಒಂದೊಂದು ಜಾತಿಯವರ ದೇಹದಲ್ಲಿ ಒಂದೊಂದು ರೀತಿ ಯ ರಕ್ತದ ಕಣವಿರಲು ಸಾಧ್ಯವೇ? "ಕೆಸರೊಳು ತಾವರೆ ಪುಟ್ಟಲು, ಅದ ತಂದು ಬಿಸಜನಾಭನಿಗೆ ಪೂಜಿಸಲಿಲ್ಲವೇ? ಹಸುವಿನ ಮಾಂಸದೊಳುತ್ಪತ್ತಿ ಕ್ಷೀರವು ವಸುಧೆಯೊಳಗೆ ಭೂಸುರರುಣಲಿಲ್ಲವೇ?"- ತಾವರೆ ಹೂವು ಹುಟ್ಟಿದ್ದು ಕೆಸರಲ್ಲಾದರೂ ದೇವರಿಗೆ ಮುಡಿಸುವುದಿಲ್ಲವೇ. ಹಸುವಿನ ಮಾಂಸದಿಂದಲೇ ಉತ್ಪತ್ತಿಯಾದ ಹಾಲನ್ನು ಅಮೃತಕ್ಕೆ ಸಮಾನವೆಂದು ಬಳಸುತ್ತಿಲ್ಲವೇ ಎಂದು ಕನಕದಾಸರು ಹೇಳುತ್ತಾರೆ. ಮನುಷ್ಯ ಈ ಲೋಕದಲ್ಲಿ ತಾನು ಕಂಡು, ಕೇಳಿ ಪಡೆದುಕೊಂಡಂತಹ ತಿಳುವಳಿಕೆಯ ಜೊತೆ ಜೊತೆಗೆ, ಮಾನವನ ಬದುಕಿನ ಆಗುಹೋಗುಗಳಿಗೆ ಕಾರಣವಾಗಿರುವ ವಾಸ್ತವದ ಸಂಗತಿಗಳನ್ನು ಅರಿತುಕೊಂಡು, ಒಳ್ಳೆಯ ನಡೆನುಡಿಗಳಿಂದ ಕೂಡಿದ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು. ಒಳ್ಳೆಯ ನಡೆ ನುಡಿಗಳು ಎಂದರೆ ತನಗೆ ತನ್ನವರಿಗೆ ಒಳಿತನ್ನು ಬಯಸುವಂತೆಯೇ ಜನಸಮುದಾಯಕ್ಕೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವಂತಹ ಸಾಮಾಜಿಕ ವರ್ತನೆ. ನಾನು ನನ್ನದೆಂಬ ಅಹಂಕಾರವನ್ನು ಬಿಟ್ಟು, ನಾವೆಲ್ಲರೂ ಒಂದೇ ಈ ಜಗದಲ್ಲಿ ಎನ್ನುವ ಸತ್ಯವನ್ನು ಅರಿತು ಬದುಕಿ ಮುಂದಿನ ಪೀಳಿಗೆಗೆ ದಾರಿ ದೀಪವಾಗವಾಗೋಣ...

# ವೈದ್ಯೋನಾರಾಯಣೋ ಹರೀಃ

## ಕವಟೆಕಾಯ್ಮರ




ಇದೊಂದು ಎಲೆಯುದುರುವ ಮರವಾಗಿದೆ. ಕಾಂಡದ ತೊಗಟೆಯು ಕಾರ್ಕಿಯ ಶಂಕುವಿನಾಕಾರದ ಮುಳ್ಳುಗಳನ್ನು ಹೊಂದಿದ್ದು ತೊಗಟೆ ಕಂದು ಬಣ್ಣದಲ್ಲಿರುತ್ತದೆ. ಎಲೆಯ ಕಿರು ಕೊಂಬೆಗಳು ದುಂಡಾಗಿದ್ದು, ವಾಯು ವಿನಿಮಯ ಬೆಂಡು ರಂಧ್ರಗಳ ಸಮೇತವಿದ್ದು ಮತ್ತು ರೋಮ ರಹಿತವಾಗಿರುತ್ತದೆ. ಇದರ ಬೀಜಗಳು ಗೋಳಾಕಾರಲ್ಲಿದ್ದು, ನಯವಾದ ನೀಲಿ ಕಂದು ಬಣ್ಣದಲ್ಲಿರುತ್ತದೆ. ಇದರ ಹಣ್ಣು ರುಚಿ ಮತ್ತು ಸುವಾಸನೆಯನ್ನು ಹೊಂದಿರುತ್ತದೆ. ಮರ ಪಶ್ಚಿಮ ಘಟ್ಟಗಳ ಪರ್ವತ ಶ್ರೇಣಿಯಲ್ಲಿ ವ್ಯಾಪಕವಾಗಿ ಬೆಳೆಯುತ್ತದೆ. ಕೊಡಗಿನ ಜನರ ಆಹಾರದಲ್ಲಿ ಮಸಾಲೆಯಾಗಿ ಇದರ ತೊಗಟೆಯನ್ನು ಬಳಸಲಸುತ್ತಾರೆ. ಹಣ್ಣುಗಳು ಮತ್ತು ಚಿಗುರು ಎಲೆಗಳನ್ನು ಬೇಯಿಸಿ ತಿನ್ನಲಾಗುತ್ತದೆ. ಈ ಮರವು ಸುಣ್ಣ-ಮೆಣಸಿನ ಪರಿಮಳವನ್ನು ಹೊಂದಿರುತ್ತದೆ. ಹಣ್ಣುಗಳ ಸಿಪ್ಪೆ, ಬೀಜಗಳು, ಕಾಂಡಗಳ ತೊಗಟೆ ಮತ್ತು ಬೇರುಗಳು ಹಾಗೂ ಹಣ್ಣುಗಳಿಂದ ಪಡೆಯಲಾದ ಎಣ್ಣೆ ಯನ್ನು ಔಷಧೀಯ ಉದ್ದೇಶಗಳಿಗಾಗಿ ಬಳಸಲಾಗುತ್ತದೆ. ಅಷ್ಟೇ ಅಲ್ಲದೆ ಔಷದೀಯ ಗುಣಗಳನ್ನು ಹೊಂದಿರುವ ಈ ಮರದ ಎಲ್ಲಾ ಭಾಗಗಳನ್ನು ಮನೆ ಮದ್ದಿನಲ್ಲಿ ಬಳಸಲಾಗುತ್ತದೆ.

ತೊಗಟೆಯ ಕಷಾಯವನ್ನು ಎದೆಯ ನೋವಿನ ಚಿಕಿತ್ಸೆಯಲ್ಲಿ ಬಳಸಲಾಗುತ್ತದೆ.

ಹಣ್ಣುಗಳನ್ನು ಡಿಸ್ಪೆಪ್ಸಿಯಾ, ಆಸ್ತಮಾ ಮತ್ತು ಬ್ರಾಂಕೈಟಿಸ್, ಹೃದಯ ತೊಂದರೆಗಳು, ಹಲ್ಲು ನೋವು ಮತ್ತು ಸಂಧಿವಾತಗಳ ಚಿಕಿತ್ಸೆಗೆ ಬಳಸಲಾಗುತ್ತದೆ.

ಹೊಟ್ಟೆ ನೋವುಗಳಿಗೆ ಪರಿಹಾರವಾಗಿ ಬಾಹ್ಯವಾಗಿ ಬಳಸಲಾಗುತ್ತದೆ.

ಹಣ್ಣಿನ ಚರ್ಮಗಳು ಉತ್ತೇಜಕ ಮತ್ತು ಜೀರ್ಣಕಾರಿ ಗುಣಲಕ್ಷಣಗಳನ್ನು ಹೊಂದಿದೆ.

ಎದೆ ನೋವುಗಳಿಗೆ ಇದರ ಕಷಾಯವನ್ನು ಬಳಸಲಾಗುತ್ತದೆ.

ಗೋವಾದಲ್ಲಿ ಮೂತ್ರಪಿಂಡಗಳಿಗೆ ಶುದ್ಧೀಕರಿಸಲು ಮೂಲ ತೊಗಟೆಯನ್ನು ಬಳಸಲಾಗುತ್ತದೆ.

ಕಾಲರಾಗೆ ಅಗತ್ಯ ಎಣ್ಣೆ ಅಲ್ಲದೆ ನಂಜುನಿರೋಧಕ ಅಥವಾ ಸೋಂಕು ನಿವಾರಕವನ್ನಾಗಿ ಬಳಸಲಾಗುತ್ತದೆ.

ಅರುಣಾಚಲ ಪ್ರದೇಶದ ಕಣಿವೆಯ ಆದಿಬುಡಕಟ್ಟುಗಳು ನರಹುಲಿ ಮತ್ತು ಕಾಮಾಲೆಗಳ ಚಿಕಿತ್ಸೆಗಾಗಿ ಬೇಯಿಸಿದ ಎಲೆಗಳನ್ನು ಬಳಸುತ್ತಾರೆ.

# ಕ್ಷೇತ್ರದರ್ಶನ

ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕು, ಹಲಗೂರು ಹೋಬಳಿಯಲ್ಲಿರುವ ಮುತ್ತತ್ತಿ ಶ್ರೀ ಆಂಜನೇಯಸ್ವಾಮಿ ದೇವಸ್ಥಾನ ಪ್ರಸಿದ್ದ ಯಾತ್ರಾ ಸ್ಥಳವಾಗಿದೆ. ಕಾವೇರಿ ನದಿಯ ಹರಿವಿನ ಸುಂದರ ಪ್ರಕೃತಿ ಸೌಂದರ್ಯದೊಂದಿಗೆ ಕಂಗೊಳಿಸುವ ಚಿಕ್ಕ ಗ್ರಾಮವೇ ಮುತ್ತತ್ತಿ. ರಮಣೀಯ ಕಣಿವೆ, ರಭಸದಿಂದ ಹರಿಯುವ ನೀರಿನ ಸೆಳವುಳ್ಳ ಸಣ್ಣ ಹಳ್ಳಗಳು ಇಲ್ಲಿವೆ. ಹಲವಾರು ಬಗೆಯ ಪ್ರಾಣಿ ಪಕ್ಷಿಗಳು ಈ ಅರಣ್ಯದಲ್ಲಿ ನೆಲೆಸಿವೆ. ಮುತ್ತತ್ತಿ ಪೌರಾಣಿಕ ಮಹಾಕಾವ್ಯವಾದ ರಾಮಾಯಣದಲ್ಲಿ ಬರುವ ಒಂದು ಪ್ರದೇಶವಾಗಿದೆ ಎಂಬ ಪ್ರತೀತಿ ಇದೆ. ಇಲ್ಲಿ ಪ್ರಸಿದ್ಧವಾದ ಹನುಮನ ಮಂದಿರವಿದ್ದು ಅದಕ್ಕೆ ಸ್ಥಳೀಯರು ಹನುಮಂತರಾಯ ಅಥವಾ ಮುತ್ತೆತ್ತರಾಯ ದೇವಸ್ಥಾನವೆಂದು ಕರೆಯುತ್ತಾರೆ. ಶ್ರೀ ಆಂಜನೇಯಸ್ವಾಮಿ ಮೂರ್ತಿಯು ಮುತ್ತತ್ತಿಯಲ್ಲಿ ಭೂಮಿಯಿಂದ ಮೂಡಿದ್ದು ಸದರಿ ಜಾಗದಲ್ಲಿ ಮೂಡಿರುವ ಮೂರ್ತಿಯನ್ನು ಭೂಮಿಯಲ್ಲೇ ಹೂತು ಹನುಮಂತನ ವಿಗ್ರಹವನ್ನು ಕೆತ್ತಿಸಿ




ಮುತ್ತೆತ್ತರಾಯ

ಪ್ರತಿಷ್ಠಾಪನೆ ಮಾಡಿ ಆ ಜಾಗದಲ್ಲಿ ದೇವಸ್ಥಾನವನ್ನು 1986-87ನೇ ಸಾಲಿನಲ್ಲಿ ಭಕ್ತಾಧಿಗಳ ವಂತಿಕೆಯಿಂದ ಹಣ ಕ್ರೂಢೀಕರಿಸಿ ದೇವಸ್ಥಾನವನ್ನು ನಿರ್ಮಿಸಲಾಗಿದೆ. ಪುರಾಣದ ಹಿನ್ನೆಲೆಯ ಪ್ರಕಾರ ರಾಮಾಯಣದ ಕಾಲದಲ್ಲಿ ಶ್ರೀರಾಮಚಂದ್ರಪ್ರಭು ಲಂಕಾಧಿಪತಿ ರಾವಣನನ್ನು ಕೊಂದು ವಿಭೀಷಣನಿಗೆ ಪಟ್ಟಕಟ್ಟಿ, ಶ್ರೀ ರಾಮಚಂದ್ರ, ಸೀತಾಮಾತೆ, ಲಕ್ಷ್ಮಣ ಮತ್ತು ಆಂಜನೇಯರ ಸಮೇತ ಲಂಕೆಯಿಂದ ಅಯೋಧ್ಯೆಗೆ ಹಿಂದಿರುಗಿ ಹೋಗುವಾಗ ಬಸವನ ಬೆಟ್ಟ ಅರಣ್ಯ ಪ್ರದೇಶದ ಪ್ರಕೃತಿ ಸೌಂದರ್ಯಕ್ಕೆ ಮನಸೋತು ಒಂದು ದಿನ ಇಲ್ಲೇ ತಂಗಿ ಹೋಗಲು ನಿರ್ಧರಿಸುತ್ತಾರೆ ಮರುದಿನ ಬೆಳಗ್ಗೆ ಕಾವೇರಿ ನದಿ ತೀರದಲ್ಲಿರುವ ಈಗಿನ ತಿರುಗಣೆ ಮಡುವಿನಲ್ಲಿ ಕುಳಿತು ತಾಯಿ ಸೀತಾದೇವಿ ಸ್ನಾನ ಮಾಡುತ್ತಿದ್ದಾಗ ಸೀತಾಮಾತೆಯ ಮುತ್ತಿನ ಮೂಗುತಿಯು ಕಾವೇರಿ ನದಿಯಲ್ಲಿ ಬಿದ್ದು ಹೋಗಿರುವುದಾಗಿ ತನ್ನ ಪತಿಯಾದ ಶ್ರೀ ರಾಮರಿಗೆ ಹೇಳಿದಾಗ ಅಲ್ಲೇ ಇದ್ದ ಹನುಮಂತನಿಗೆ ನೀರಿನಲ್ಲಿದ್ದ ಮೂಗುತಿಯನ್ನು ಹುಡುಕಲು ಶ್ರೀ ರಾಮಚಂದ್ರ ಪ್ರಭು ಹೇಳುತ್ತಾರೆ ಅವರ ಆಜ್ಞೆಯಂತೆ ಆಂಜನೇಯಸ್ವಾಮಿ ಅವರು ತನ್ನ ಬಾಲವನ್ನು ನೀರಿನಲ್ಲಿ ತಿರುಗಿಸಿ ನೀರಿನಲ್ಲಿ ಕಳೆದುಹೋಗಿದ್ದ ಮುತ್ತಿನ ಮೂಗುತಿ ಕಾಣಿಸಿದಾಗ ಮೂಗುತಿಯನ್ನು ತೆಗೆದು ಸೀತಾ ಮಾತೆಗೆ ನೀಡಿದನು. ಹನುಮಂತ ಬಾಲವನ್ನು ನೀರಿನಲ್ಲಿ ತಿರುಗಿಸಿದ ರಭಸಕ್ಕೆ ಆ ಜಾಗದಲ್ಲಿ ಇಂದಿಗೂ ಕಾವೇರಿ ನದಿಯ ನೀರು ಒಂದು ಸುತ್ತು ತಿರುಗಿ ಹೋಗುತ್ತದೆ. ಆದ ಕಾರಣ ಆ ಸ್ಥಳಕ್ಕೆ ತಿರುಗಣೆಮಡು ಎಂದು ಕರೆದು ಪ್ರಸಿದ್ದಿಯಾಗಿದೆ. ಹನುಮಂತನು ಸೀತಾಮಾತೆಗೆ ಮುತ್ತಿನ ಮೂಗುತಿಯನ್ನು ತನ್ನ ಬಾಲದಲ್ಲಿ ತೆಗೆದು ಕೊಟ್ಟಿರುವುದಕ್ಕೆ ತಾಯಿ ಸೀತಾದೇವಿ ಆಂಜನೇಯಸ್ವಾಮಿಯನ್ನು ಮುತ್ತೆತ್ತರಾಯನೆಂದು ಹೆಸರು ಕರೆದರು. ಹಾಗೆ ಆಂಜನೇಯಸ್ವಾಮಿಯನ್ನು ಈ ಕ್ಷೇತ್ರದಲ್ಲಿ ಮುತ್ತೆತ್ತರಾಯಸ್ವಾಮಿಯಾಗಿ ನೆಲೆಸು ಎಂದು ಹಾರೈಸುತ್ತಾರೆ. ಈಗ ಕ್ಷೇತ್ರವನ್ನು ಮುತ್ತತ್ತಿ ಎಂದು ಕರೆಯಲಾಗುತ್ತದೆ. ಶ್ರಾವಣ ಮಾಸದಲ್ಲಿ ನಡೆಯುವ ಮುತ್ತೆತ್ತರಾಯನ ಜಾತ್ರೆಯಲ್ಲಿ ಭಕ್ತರು ಸಹಸ್ರ ಸಂಖ್ಯೆಯಲ್ಲಿ ಸೇರುತ್ತಾರೆ.

# ಕಾಮಧೇನು

## ಪ್ರಕೃತಿಯೇ ನಮಗೆ ದಾರಿ ದೀಪ

@ ಕೃಷ್ಣಾಮೃತ

ಗುವಾಹಟಿಯಿಂದ ಈಶಾನ್ಯಕ್ಕೆ ಸುಮಾರು 250 ಕಿಲೋಮೀಟರ್ ದೂರದಲ್ಲಿರುವ ಮಜುಲಿಯು ಭಾರತದ ಅಸ್ಸಾಂನಲ್ಲಿರುವ ಒಂದು ದೊಡ್ಡ ನದಿ ದ್ವೀಪವಾಗಿದ್ದು, ಇದು ದಕ್ಷಿಣ ಮತ್ತು ಪೂರ್ವಕ್ಕೆ ಬ್ರಹ್ಮಪುತ್ರ ನದಿ, ಪಶ್ಚಿಮಕ್ಕೆ ಸುಬನ್ಸಿರಿ ನದಿ ಮತ್ತು ಉತ್ತರಕ್ಕೆ ಖೆರ್ಕುಟಿಯಾ ಕ್ಸುತಿ ಎಂಬ ಬ್ರಹ್ಮಪುತ್ರ ನದಿಯ ಅನಾಬ್ರಂಚ್‌ನಿಂದ ರೂಪುಗೊಂಡಿದೆ. ಈ ದ್ವೀಪದಲ್ಲಿ ಮಿಸಿಂಗ್, ದಿಯೋರಿ ಮತ್ತು ಸೋನೋವಾಲ್ ಕಚ್ರಿ ಬುಡಕಟ್ಟು ಜನಾಂಗದವರು ನೆಲೆಸಿದ್ದಾರೆ. ಇದು ಅಸ್ಸಾಮಿ ನವ- ವೈಷ್ಣವ ಸಂಸ್ಕೃತಿಯ ಕೇಂದ್ರವಾಗಿದೆ. ಇದು 2016ರಲ್ಲಿ ಸರ್ಕಾರಿ ಜಿಲ್ಲೆಯಾದ ದೇಶದ ಮೊದಲ ದ್ವೀಪವಾಗಿದೆ. 2004 ರಿಂದ ಮಜುಲಿ ವಿಶ್ವ ಪರಂಪರೆಯ ತಾಣವಾಗಿ ನಾಮನಿರ್ದೇಶನಕ್ಕಾಗಿ UNESCO ತಾತ್ಕಾಲಿಕ ಪಟ್ಟಿಯಲ್ಲಿದೆ. ಈ ದ್ವೀಪವು ಉದ್ದವಾದ ಮತ್ತು ತೆಳ್ಳಗಿನ ಭೂಮಿಯಾಗಿದ್ದು, ಎರಡು ಸಮಾನಾಂತರ ನದಿಗಳ ನಡುವೆ ಇದೆ, ಉತ್ತರಕ್ಕೆ ಬ್ರಹ್ಮಪುತ್ರ ಮತ್ತು ದಕ್ಷಿಣಕ್ಕೆ ಬುರ್ಹಿಡಿಹಿಂಗ್‌ಗಳು ಲಖು ಎಂಬ ಸ್ಥಳದಲ್ಲಿ ಸೇರುತ್ತಾರೆ. ಮೂಲತಃ ಇದು ರತ್ನಪುರ ಎಂಬ ಹೆಸರನ್ನು ಹೊಂದಿದ್ದು, ಸೂತಿಯ ಸಾಮ್ರಾಜ್ಯದ ರಾಜಧಾನಿಯಾಗಿ ಸೇವೆ ಸಲ್ಲಿಸಿತ್ತು. 17 ನೇ ಶತಮಾನದಲ್ಲಿ ಭಾರಿ ಭೂಕಂಪಗಳ ಸರಣಿಯಾಗಿ ಈ ಪ್ರದೇಶವನ್ನು ಪ್ರದೇಶವನ್ನು ಮರುರೂಪಿಸಿತು. ಈ ಪ್ರವಾಹವು ಬ್ರಹ್ಮಪುತ್ರದ ಮಾರ್ಗವನ್ನು ಬದಲಿಸಲು ಕಾರಣವಾಯಿತು. ಇದರ ಪರಿಣಾಮವಾಗಿ ಮಜುಲಿ ದ್ವೀಪದ ರಚನೆಯಾಗಿದೆ. ಮಜುಲಿಯು 16 ನೇ ಶತಮಾನದಿಂದಲೂ ಅಸ್ಸಾಮಿ ನಾಗರಿಕತೆಯ ಸಾಂಸ್ಕೃತಿಕ ಕೇಂದ್ರವಾಗಿದೆ. ಇದು 16 ನೇ ಶತಮಾನದ ಸಮಾಜ ಸುಧಾರಕ ಶ್ರೀಮಂತ ಶಂಕರದೇವ ಅವರ ಭೇಟಿಯೊಂದಿಗೆ ಸಂಪರ್ಕ ಹೊಂದಿದೆ. ನವ-ವೈಷ್ಣವ ಚಳುವಳಿಯ ಪ್ರವರ್ತಕರಾದ ಶಂಕರದೇವ ಅವರು ವೈಷ್ಣವ ಧರ್ಮವನ್ನು ಬೋಧಿಸಿದರು ಮತ್ತು ದ್ವೀಪದಲ್ಲಿ ಸತ್ರಸ್ ಎಂಬ ಮಠಗಳನ್ನು ಸ್ಥಾಪಿಸಿದರು. ಸತ್ರಗಳ ಸ್ಥಾಪನೆಯೊಂದಿಗೆ ಮಜುಲಿ ವೈಷ್ಣವರ ಪ್ರಮುಖ ಕೇಂದ್ರವಾಯಿತು. ಭಾರತವು 1947ರಲ್ಲಿ ಸ್ವಾತಂತ್ರ್ಯ ಪಡೆಯುವವರೆಗೂ ಇದು ಬ್ರಿಟಿಷ್ ಆಳ್ವಿಕೆಯಲ್ಲಿತ್ತು. ಕಳೆದ 200 ವರ್ಷಗಳಲ್ಲಿ ಮಜುಲಿ ಅದರ ಸುತ್ತಲಿನ ನದಿ ಬೆಳೆದಂತೆ ಗಾತ್ರದಲ್ಲಿ ಕುಗ್ಗಿದೆ.




ಮಜುಲಿಯ ಜನಸಂಖ್ಯೆಯಲ್ಲಿ ಅರುಣಾಚಲ ಪ್ರದೇಶದಿಂದ ಶತಮಾನಗಳ ಹಿಂದೆ ಮಜುಲಿಗೆ ವಲಸೆ ಬಂದ ಮಿಸಿಂಗ್, ದಿಯೊರಿ, ಕೈಬರ್ಟಾ ಮತ್ತು ಸೊನೊವಾಲ್ ಕಚಾರಿ ಬುಡಕಟ್ಟು ಜನಾಂಗದವರನ್ನು ಸ್ಥಳೀಯ ಸಮುದಾಯಗಳು ಒಳಗೊಂಡಿವೆ. ಹಿಂದೂ ಅಸ್ಸಾಮಿ ಸಮುದಾಯಗಳಲ್ಲಿ ಕೋಚ್, ಕಲಿತಾ, ಅಹೋಮ್, ಸುತಿಯಾ ಮತ್ತು ಜೋಗಿ ಸೇರಿವೆ. ಇಲ್ಲಿನ ಭಾಷೆ ಅಸ್ಸಾಮಿ ಮತ್ತು ದಿಯೋರಿ. ದ್ವೀಪವು 144 ಹಳ್ಳಿಗಳನ್ನು ಹೊಂದಿದ್ದು, 150,000 ಕ್ಕಿಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿದೆ. ಫೆಬ್ರವರಿ ಮಧ್ಯದಲ್ಲಿ ಐದು ದಿನಗಳ ಕಾಲ ಆಚರಿಸಲಾಗುವ ಅಲಿ ಆಯ್ ಲಿಗಾಂಗ್ ಹಬ್ಬವು ಎರಡನೇ ಬುಧವಾರದಂದು ಆರಂಭಗೊಂಡು ಫಾಲ್ಗುನ್ ತಿಂಗಳ ಮೊದಲ ಬುಧವಾರದಂದು ಕೊನೆಗೊಳ್ಳುವ ಭವ್ಯವಾದ ಕಾರ್ಯಕ್ರಮವಾಗಿದೆ. ಪುರಂಗ್ ಅಪಿನ್ ಅಂದರೆ ಪ್ಯಾಕ್ ಮಾಡಿದ ಬೇಯಿಸಿದ ಅನ್ನ, ಅಪಾಂಗ್ ಅಂದರೆ ಅಕ್ಕಿ ಬಿಯರ್, ಮತ್ತು ವಿವಿಧ ಹಂದಿಮಾಂಸ, ಮೀನು ಮತ್ತು ಕೋಳಿ ಭಕ್ಷ್ಯಗಳಂತಹ ಸ್ಥಳೀಯ ಭಕ್ಷ್ಯಗಳನ್ನು ನೀಡಲಾಗುತ್ತದೆ. ಗುಮ್ರಾಗ್ ಸೋಮನ್ ಎಂಬ ಸಾಂಪ್ರದಾಯಿಕ ಮಿಸಿಂಗ್ ನೃತ್ಯವನ್ನು ಪ್ರತಿ ಹಳ್ಳಿಯಲ್ಲಿ ಉತ್ತಮ ಫಸಲಿಗಾಗಿ ದೋನಿ ಪೊಲೊ ಪೂಜಿಸಲಾಗುತ್ತದೆ. ಕಳೆದ ಅರ್ಧ ಸಹಸ್ರಮಾನದಿಂದ ಮಜುಲಿಯು ಅಸ್ಸಾಮಿ ನಾಗರಿಕತೆಯ ಸಾಂಸ್ಕೃತಿಕ ಕೇಂದ್ರ ಮತ್ತು ತೊಟ್ಟಿಲು. ಆಯುಧಗಳು, ಪಾತ್ರೆಗಳು, ಆಭರಣಗಳು ಮತ್ತು ಸಾಂಸ್ಕೃತಿಕವಾಗಿ ಮಹತ್ವದ ವಸ್ತುಗಳಂತಹ ಪ್ರಾಚೀನ ಕಲಾಕೃತಿಗಳನ್ನು ಸತ್ರಗಳು ರಕ್ಷಿಸುತ್ತವೆ. ಪ್ರಾಚೀನ ಹರಪ್ಪನ್ ನಾಗರಿಕತೆಯ ವಿಧಾನಗಳನ್ನು ಅನುಸರಿಸಿ ಸಾಂಪ್ರದಾಯಿಕ ಕುಂಬಾರಿಕೆಯನ್ನು ಮಾಡಲಾಗುತ್ತದೆ. ಈ ಬುಡಕಟ್ಟು ಜನಾಂಗದವರ ಕೈಮಗ್ಗದ ಕೆಲಸವು ಅಂತರರಾಷ್ಟ್ರೀಯ ಮನ್ನಣೆಯನ್ನು ಪಡೆದಿದೆ. ಕೃಷ್ಣನ ಜೀವನವನ್ನು ಚಿತ್ರಿಸುವ ಮೂರು ದಿನಗಳ ಕಾಲ ನಡೆಯುವ ರಾಸ ಮಹೋತ್ಸವ ಉತ್ಸವವು ದ್ವೀಪದಲ್ಲಿರುವ ಪ್ರತಿಯೊಬ್ಬರನ್ನು ಒಳಗೊಂಡಿರುತ್ತದೆ. ದೂರದ ಜನರು, ಅನಿವಾಸಿಗಳು ಸಹ ಆಚರಿಸಲು ಬರುತ್ತಾರೆ. ಸತ್ರಗಳು ವಿವಿಧ ಕಲೆ ಮತ್ತು ಕರಕುಶಲ ಸಂಪ್ರದಾಯಗಳನ್ನು ಕರಗತ ಮಾಡಿಕೊಂಡಿವೆ. ಮುಜುಲಿಯಲ್ಲಿ ಅಕ್ಕಿ ಮುಖ್ಯ ಬೆಳೆ. ಮಜುಲಿಯು ಶ್ರೀಮಂತ ಮತ್ತು ವೈವಿಧ್ಯಮಯ ಕೃಷಿ ಸಂಪ್ರದಾಯವನ್ನು ಹೊಂದಿದೆ. ಸುಮಾರು 100 ವಿಧದ ಭತ್ತವನ್ನು ಬೆಳೆಯಲಾಗುತ್ತದೆ. ಕೃಷಿಯ ನಂತರ ಮೀನುಗಾರಿಕೆಯೂ ಪ್ರಮುಖ ಉದ್ಯಮವಾಗಿದೆ. ಉತ್ಪಾದಿಸಿದ ಅಕ್ಕಿಯ ಆಕರ್ಷಕ ಶ್ರೇಣಿಗಳಲ್ಲಿ ಕೋಮಲ್ ಸೌಲ್ ಒಂದು ವಿಶಿಷ್ಟ ವಿಧವಾಗಿದ್ದು, ಧಾನ್ಯಗಳನ್ನು 15 ನಿಮಿಷಗಳ ಕಾಲ ಬೆಚ್ಚಗಿನ ನೀರಿನಲ್ಲಿ ಮುಳುಗಿಸಿದ ನಂತರ ತಿನ್ನಬಹುದು ಮತ್ತು ಸಾಮಾನ್ಯವಾಗಿ ಉಪಹಾರ ಧಾನ್ಯವಾಗಿ ತಿನ್ನಬಹುದು. ಬಾವೊ ಧನ್, ಇದು ನೀರಿನ ಅಡಿಯಲ್ಲಿ ಬೆಳೆಯುತ್ತದೆ ಮತ್ತು ಹತ್ತು ತಿಂಗಳ ನಂತರ ಕೊಯ್ಲು ಮಾಡಲಾಗುತ್ತದೆ. ಮೀನಿನೊಂದಿಗೆ ಸಾಂಪ್ರದಾಯಿಕ ಕೇಕ್ ಮಾಡಲು ಬಳಸುವ ಜಿಗುಟಾದ ಕಂದು ಅಕ್ಕಿಯನ್ನು ಪಿತಾ ಎಂದು ಕರೆಯಲಾಗುತ್ತದೆ. ದ್ವೀಪದ ದಕ್ಷಿಣ ಭಾಗವು ಪಕ್ಷಿ ಪ್ರೇಮಿಗಳ ಸ್ವರ್ಗವಾಗಿದೆ. ಹವಾಮಾನ ಮತ್ತು ವನ್ಯಜೀವಿ ವೀಕ್ಷಣೆಯು ತೃಪ್ತಿಕರವಾಗಿರುವುದರಿಂದ ನವೆಂಬರ್ ಮತ್ತು ಮಾರ್ಚ್ ನಡುವೆ ಭೇಟಿ ಉತ್ತಮ.

**ಮುಂದುವರೆಯುವುದು...**

# ಕಲ್ಪವೃಕ್ಷ

@ಪ್ರೀತಂ ರೈ ಇ

## ಲಾನ್ಸ್ ನಾಯಕ್ ಲಖಾ ಸಿಂಗ್

1965 ರ ಇಂಡೋ-ಪಾಕ್ ಯುದ್ಧದ ಸಮಯದಲ್ಲಿ, 68 ಪದಾತಿ ದಳದ ಅಡಿಯಲ್ಲಿ J&K ನ URI ಸೆಕ್ಟರ್‌ನಲ್ಲಿ ಲಾನ್ಸ್ ನಾಯಕ್ ಲಖಾ ಸಿಂಗ್ ಅವರ ಘಟಕವನ್ನು ಕದನ-ವಿರಾಮ ರೇಖೆ ಉದ್ದಕ್ಕೂ ನಿಯೋಜಿಸಲಾಯಿತು. 1965 ರ ಆರಂಭದಿಂದಲೂ ಕದನ ವಿರಾಮ ರೇಖೆಯಲ್ಲಿ ಪಾಕಿಸ್ತಾನಿ ಪಡೆಗಳು ಭಾರತದ ಸರಬರಾಜು ಬೆಂಗಾವಲು ಪಡೆಗಳ ಮೇಲೆ ಗುಂಡು ಹಾರಿಸಲು ಪ್ರಾರಂಭಿಸಿದವು. 1995 ರ ಆಗಸ್ಟ್ 1 ನೇ ವಾರದಲ್ಲಿ ನಿಧಾನವಾಗಿ ಗಡಿಯಾಚೆಯಿಂದ ಒಳನುಸುಳುವಿಕೆ ಹೆಚ್ಚಾಯಿತು, ಅವರ "ಆಪರೇಷನ್ ಜಿಬ್ರಾಲ್ಟರ್"ನ ಭಾಗವಾಗಿ ಪಾಕಿಸ್ತಾನದ ಗೊರಿಲ್ಲಾ ಪಡೆಗಳು ವ್ಯಾಪಕ ಗೊಂದಲಗಳನ್ನು ಸೃಷ್ಟಿಸಲು ಕಾಶ್ಮೀರ ಕಣಿವೆಯನ್ನು ಪ್ರವೇಶಿಸಿದವು. ಪಾಕಿಸ್ತಾನದ ಒಳಗೆ CFL ನಿಂದ 8 ಕಿಮೀ ದೂರದಲ್ಲಿರುವ ಹಾಜಿ-ಪಿರ್ ಪಾಸ್ ಒಳನುಸುಳುವಿಕೆಯ ಪ್ರಮುಖ ಮಾರ್ಗಗಳಲ್ಲಿ ಒಂದಾಗಿದೆ. ಭಾರತೀಯ ಸೇನೆಯು ಒಳನುಸುಳುವಿಕೆ ಮಾರ್ಗವನ್ನು ಪ್ಲಗ್ ಮಾಡಲು ಹಾಜಿ-ಪಿರ್ ಪಾಸ್ ಅನ್ನು ವಶಪಡಿಸಿಕೊಳ್ಳಲು ನಿರ್ಧರಿಸಿತು. ಹಾಜಿ-ಪೀರ್ ಮೇಲೆ ದಾಳಿ ಮಾಡುವ ಮತ್ತು ಆಕ್ರಮಿಸಿಕೊಳ್ಳುವ ಕಾರ್ಯಾಚರಣೆಯನ್ನು "ಆಪ್ ಬಕ್ಷಿ" ಎಂದು ಕರೆಯಲಾಯಿತು, ಇದನ್ನು 69 ಪದಾತಿ ದಳದ ಬ್ರಿಗೇಡ್ ಕಮಾಂಡರ್ ಬ್ರಿಗೇಡಿಯರ್ ಜೋರಾವರ್ ಚಂದ್ ಬಕ್ಷಿ ಅವರ ಹೆಸರನ್ನು ಇಡಲಾಗಿದೆ. ಹಾಜಿ-ಪಿರ್ ಪಾಸ್ ಪೂರ್ವ ಮತ್ತು ಪಶ್ಚಿಮ ಭಾಗಗಳಲ್ಲಿ ಎರಡು ಸಾಲುಗಳಿಂದ ಸುತ್ತುವರಿದಿದೆ. ಕಾರ್ಯಾಚರಣೆಯ ಯೋಜನೆಯು ಮೊದಲು ಪಾಸ್‌ನ ಭುಜಗಳನ್ನು ಆಕ್ರಮಿಸಿಕೊಳ್ಳುವುದು ಮತ್ತು ನಂತರ ಪಾಸ್ ಅನ್ನು ಜಯಿಸಲು




ಚಲಿಸುವುದು. 19 ಈಸ್ಟರ್ನ್ ರಿಡ್ಜ್ ಅನ್ನು ವಶಪಡಿಸಿಕೊಳ್ಳುವ ಜವಾಬ್ದಾರಿಯನ್ನು ಪಂಜಾಬ್‌ಗೆ ನೀಡಲಾಯಿತು. ಈಸ್ಟರ್ನ್ ರಿಡ್ಜ್‌ಗಾಗಿ ನಡೆದ ಯುದ್ಧದ ಸಮಯದಲ್ಲಿ, 19 ಪಂಜಾಬ್ ಬೆಟಾಲಿಯನ್‌ನ ಚಾರ್ಲಿ ಫ್ಲೈಟ್ ಮೇಜರ್ ಪರ್ಮಿಂದರ್ ಸಿಂಗ್ ನೇತೃತ್ವದಲ್ಲಿ ಪಾಯಿಂಟ್ 877 ಅನ್ನು ವಶಪಡಿಸಿಕೊಳ್ಳಲು ವಹಿಸಲಾಯಿತು. ಲಾನ್ಸ್ ನಾಯಕ್ ಲಖಾ ಸಿಂಗ್ ಅವರು ಈ ಕಾರ್ಯಾಚರಣೆಗೆ ನಿಯೋಜಿಸಲಾದ ಅ Coyನ ಭಾಗವಾಗಿದ್ದರು. ದಾಳಿಯು ಪ್ರಗತಿಯಲ್ಲಿದ್ದಂತೆ, ಲಾನ್ಸ್ ನಾಯಕ್ ಲಖಾ ಸಿಂಗ್ ಮದ್ದುಗುಂಡುಗಳು ಮುಗಿದುವು. ಆದರೆ ದೊಡ್ಡ ಧೈರ್ಯವನ್ನು ಪ್ರದರ್ಶಿಸಿದ ಲಖಾ ಸಿಂಗ್ ಶತ್ರು ಸೈನಿಕರನ್ನು ಕೊಲ್ಲಲು ತನ್ನ ಬಯೋನೆಟ್ ಬಳಸಿ ಮುಂದುವರೆಸಿದರು. ಬಯೋನೆಟ್ ಕೂಡ ಮುರಿದಾಗ, ಲಖಾ ಸಿಂಗ್ ಶೌರ್ಯದ ಅಪರೂಪದ ಪ್ರದರ್ಶನದಲ್ಲಿ ತನ್ನ ಹೆಲ್ಮೆಟ್ ಅನ್ನು ತೆಗೆದು ಶತ್ರು ಸೈನಿಕರನ್ನು ಹೊಡೆದುರುಳಿಸಲು ಪ್ರಾರಂಭಿಸಿದರು. ಆದಾಗ್ಯೂ, ಅವರು ಶತ್ರುಗಳ ಫಿರಂಗಿಯ ಸ್ಫೋಟವನ್ನು ಪಡೆದರು ಮತ್ತು ಹುತಾತ್ಮರಾದರು. ಲಖಾ ಸಿಂಗ್ ಅವರು ದೇಶ ಸೇವೆಯಲ್ಲಿ ತಮ್ಮ ಪ್ರಾಣವನ್ನು ತ್ಯಾಗ ಮಾಡಿದ ವೀರ ಸೈನಿಕ. ಅವರ ಅತ್ಯುತ್ತಮ ಧೈರ್ಯ, ಹೋರಾಟದ ಮನೋಭಾವ ಮತ್ತು ಅತ್ಯುನ್ನತ ತ್ಯಾಗಕ್ಕಾಗಿ ಅವರಿಗೆ "ವೀರ ಚಕ್ರ" ಶೌರ್ಯ ಪ್ರಶಸ್ತಿಯನ್ನು ನೀಡಲಾಯಿತು. ಅವರು ಪತ್ನಿ ಶ್ರೀಮತಿ ಸೀತಾನ್ ದೇವಿ ಅವರನ್ನು ಅಗಲಿದ್ದಾರೆ. ಲ್ಯಾನ್ಸ್ ನಾಯಕ್ ಲಖಾ ಸಿಂಗ್ ಅವರು 2 ನೇ ಫೆಬ್ರವರಿ 1933 ರಂದು ಹಿಮಾಚಲ ಪ್ರದೇಶದ ಕಂಗ್ರಾ ಜಿಲ್ಲೆಯ ಬಲಹ್ರಾ ಮರಿಯಾ ಗ್ರಾಮದಲ್ಲಿ ಶ್ರೀ ಫನಾ ರಾಮ್ ಅವರ ಪುತ್ರನಾಗಿ ಜನಿಸಿದರು. ಲಖಾ ಸಿಂಗ್ ಅವರು 22 ನೇ ವಯಸ್ಸಿನಲ್ಲಿ 22 ನೇ ವಯಸ್ಸಿನಲ್ಲಿ 1956 ರ ಜನವರಿ 9 ರಂದು ಸೈನ್ಯಕ್ಕೆ ಸೇರಿದರು. ಅವರು ಪಂಜಾಬ್ ರೆಜಿಮೆಂಟ್‌ನ 19 ಪಂಜಾಬ್ ಬಿಎನ್‌ಗೆ ನೇಮಕಗೊಂಡರು. ಇವರನ್ನು ಕರಾವಳಿ ತರಂಗಿಣಿ ಹೆಮ್ಮೆಯಿಂದ ನೆನಪಿಸಿಕೊಳ್ಳುತ್ತಿದೆ.

ಒಂದು ಮನೆಯಲ್ಲಿ ಹುಟ್ಟಿ ಇನ್ನೊಂದು ಮನೆ ಬೆಳಗುವ ಹೆಣ್ಣು ಸಾದನೆಯ ಮೆಟ್ಟಿಲನ್ನು ಮೆಟ್ಟುವುದು ಅಷ್ಟು ಸುಲಭದ ಕೆಲಸವಲ್ಲ. ಆದರೂ ಎಷ್ಟೇ ಕಷ್ಟ ಬಂದರೂ ತನ್ನ ಸಾಧನೆಯ ಗುರಿಯನ್ನು ತಲುಪಿ ಉಳಿದ ಹೆಣ್ಣು ಮಕ್ಕಳಿಗೆ ಮಾದರಿಯಾಗಿದ್ದಾರೆ. ಅಂತಹ ಹೆಣ್ಣು ಮಕ್ಕಳಲ್ಲಿ ಕರಾವಳಿ ತರಂಗಿಣಿಯ ಇಂದಿನ ಅತಿಥಿ ಒಲಿಂಪಿಕ್ಸ್‌ನಲ್ಲಿ ಪದಕ ಗೆದ್ದ ಮೊದಲ ಭಾರತೀಯ ಮಹಿಳೆ ಕರ್ಣಂ ಮಲ್ಲೇಶ್ವರಿ. ಇವರು 1 ಜೂನ್ 1975ರಲ್ಲಿ ಆಂಧ್ರಪ್ರದೇಶದ ಕುಗ್ರಾಮವಾದ ಅಮದಾಲವಲಸ ಬಳಿಯ ವೂಸವಾನಿಪೇಟಾದಲ್ಲಿ ಕರ್ಣಂ ಕುಟುಂಬದಲ್ಲಿ ಜನಿಸಿದರು. ಇವರಿಗೆ ನಾಲ್ಕು ಸಹೋದರಿಯರಿದ್ದಾರೆ. ಮಲ್ಲೇಶ್ವರಿ ಅವರು 12ನೇ ವಯಸ್ಸಿನಲ್ಲಿ ತಮ್ಮ ವೃತ್ತಿ ಜೀವನವನ್ನು ಪ್ರಾರಂಭಿಸಿದರು. ತರಬೇತುದಾರ ನೀಲಂಶೆಟ್ಟಿ ಅಪ್ಪಣ್ಣ ಅವರಲ್ಲಿ ತರಬೇತಿ ಪಡೆದರು. ಸಹೋದರಿ ಮದುವೆಯಾಗಿ ದೆಹಲಿಯಲ್ಲಿ ವಾಸಿಸುತ್ತಿದ್ದರಿಂದ ಮಲ್ಲೇಶ್ವರಿ ಅವರು ಉತ್ತಮ ತರಬೇತಿಗಾಗಿ ದೆಹಲಿ ನಗರಕ್ಕೆ ತೆರಳಿದರು. ಅಲ್ಲಿ ಇವರಿಗೆ ಉತ್ತಮ ಕ್ರೀಡಾಪಟುವಾಗಲು ಸಾಮರ್ಥ್ಯವಿದೆ ಎಂದು ಸ್ಪಷ್ಟವಾಯಿತು. ಆಕೆಯ ಪ್ರತಿಭೆಯನ್ನು ಶೀಘ್ರದಲ್ಲೇ ಭಾರತೀಯ ಕ್ರೀಡಾ ಪ್ರಾಧಿಕಾರ ಗುರುತಿಸಿತು. 1990 ರಲ್ಲಿ ಮಲ್ಲೇಶ್ವರಿಯವರನ್ನು ರಾಷ್ಟ್ರೀಯ ಶಿಬಿರಕ್ಕೆ ಸೇರಿಕೊಂಡರು. ನಾಲ್ಕು ವರ್ಷಗಳ ನಂತರ, ಅವರು 54-ಕೆಜಿ ವೇಟ್-ಲಿಫ್ಟಿಂಗ್ ವಿಶ್ವ ಚಾಂಪಿಯನ್‌ಶಿಪ್ ವಿಜೇತರಾದರು. ಮಲ್ಲೇಶ್ವರಿ 1994 ಮತ್ತು 1995 ರಲ್ಲಿ 54 ಕೆಜಿ ವಿಭಾಗದಲ್ಲಿ ವಿಶ್ವ ಪ್ರಶಸ್ತಿಯನ್ನು ಗೆದ್ದರು. 1993 ಮತ್ತು 1996 ರಲ್ಲಿ ಮೂರನೇ

# ಪಾರಿಜಾತ

ಕರಾವಳಿ ತರಂಗಿಣಿ

ಸ್ಥಾನ ಪಡೆದರು. 1994 ರಲ್ಲಿ, ಅವರು ಇಸ್ತಾನ್‌ಬುಲ್‌ನಲ್ಲಿ ನಡೆದ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಬೆಳ್ಳಿ ಗೆದ್ದರು ಮತ್ತು 1995 ರಲ್ಲಿ ಅವರು 54 ಕೆಜಿ ವಿಭಾಗದಲ್ಲಿ ಕೊರಿಯಾದಲ್ಲಿ ನಡೆದ ಏಷ್ಯನ್ ವೇಟ್‌ಲಿಫ್ಟಿಂಗ್ ಚಾಂ




ಪಿಯನ್ ಶಿಪ್‌ಗಳನ್ನು ಗೆದ್ದರು. ಆ ವರ್ಷ, ಅವರು ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ದಾಖಲೆಯ 113 ಕೆಜಿ ಎತ್ತುವ ಮೂಲಕ ಚೀನಾದಲ್ಲಿ ಪ್ರಶಸ್ತಿಯನ್ನು ಗೆದ್ದರು. ತನ್ನ ಒಲಂಪಿಕ್ ಗೆಲುವಿಗೆ ಮುಂಚೆಯೇ, ಮಲ್ಲೇಶ್ವರಿ 11 ಚಿನ್ನದ ಪದಕಗಳನ್ನು ಒಳಗೊಂಡಂತೆ 29 ಅಂತರಾಷ್ಟ್ರೀಯ ಪದಕಗಳೊಂದಿಗೆ ಎರಡು ಬಾರಿ ವೇಟ್ ಲಿಫ್ಟಿಂಗ್ ವಿಶ್ವ ಚಾಂಪಿಯನ್ ಆಗಿದ್ದರು. ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಪದಕಗಳ ಜೊತೆಗೆ, ಮಲ್ಲೇಶ್ವರಿಗೆ 1994 ರಲ್ಲಿ ಅರ್ಜುನ ಪ್ರಶಸ್ತಿ , 1999 ರಲ್ಲಿ ರಾಜೀವ್ ಗಾಂಧಿ ಖೇಲ್ ರತ್ನ, ಮತ್ತು 1999ರಲ್ಲಿ ಪದ್ಮಶ್ರೀ ಪ್ರಶಸ್ತಿ ಪಡೆದರು. 2000 ರ ಸಿಡ್ನಿ ಒಲಿಂಪಿಕ್ಸ್‌ನಲ್ಲಿ ಮಲ್ಲೇಶ್ವರಿ "ಸ್ನ್ಯಾಚ್"ನಲ್ಲಿ 110 ಕೆಜಿ ಮತ್ತು "ಕ್ಲೀನ್ ಮತ್ತು ಜರ್ಕ್" ವಿಭಾಗದಲ್ಲಿ 130 ಕೆಜಿ ಒಟ್ಟು 240 ಕೆಜಿ ಎತ್ತಿ, ಒಲಿಂಪಿಕ್ ಪದಕ ಗೆದ್ದ ಮೊದಲ ಭಾರತೀಯ ಮಹಿಳೆಯಾಗಿದ್ದಾರೆ. 1997 ರಲ್ಲಿ, ಮಲ್ಲೇಶ್ವರಿಯವರು ತನ್ನ ಸಹ ವೇಟ್ ಲಿಫ್ಟರ್ ರಾಜೇಶ್ ತ್ಯಾಗಿ ಅವರನ್ನು ವಿವಾಹವಾದರು. 2001 ರಲ್ಲಿ, ತನ್ನ ಕ್ರೀಡೆಯಲ್ಲಿ ಒಲಿಂಪಿಕ್ ಕಂಚಿನ ಪದಕವನ್ನು ಗೆದ್ದ ಒಂದು ವರ್ಷದ ನಂತರ ಅವರಿಗೆ ಗಂಡು ಮಗುವಾಯಿತು. ಅವರು 2002 ರ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಸ್ಪರ್ಧೆಗಳಿಗೆ ಮರಳಲು ಯೋಜಿಸಿದ್ದರು. ಆದರೆ ಅವರ ತಂದೆಯ ಮರಣದ ಕಾರಣದಿಂದ ಹಿಂದೆ ಸರಿದರು. 2004ರ ಒಲಿಂಪಿಕ್ಸ್‌ನಲ್ಲಿ ಗುರಿ ಮುಟ್ಟಲು ವಿಫಲವಾದ ನಂತರ ಅವರು ನಿವೃತ್ತರಾದರು. ಕರ್ಣಂ ಮಲ್ಲೇಶ್ವರಿ ಮತ್ತು ತ್ಯಾಗಿ ಪ್ರಸ್ತುತ ಹರಿಯಾಣದ ಯಮುನಾ ನಗರದಲ್ಲಿ ತಮ್ಮ ಮಗ ಮತ್ತು ಅತ್ತೆಯೊಂದಿಗೆ ವಾಸಿಸುತ್ತಿದ್ದು, ಅವರು ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾದಲ್ಲಿ ಮುಖ್ಯ ಜನರಲ್ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಾರೆ. ಇವರಿಗೆ ಕರಾವಳಿ ತರಂಗಿಣಿ ಶುಭ ಹಾರೈಸುತ್ತಿದೆ.

## ಬಿಜೆಪಿ ಹೆಣದ ಮೇಲೆ ರಾಜಕೀಯ ಮಾಡುತ್ತಿದೆ –ಭಂಡಾರಿ

ಒಂದನೇ ಪುಟದಿಂದ......

ಪರಿಣಮಿಸಿರುವ ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು ಮಣಿಸುವ ಸಲುವಾಗಿ ಬಿಜೆಪಿ ಅವರ ಮೇಲೆ ಸಲ್ಲದ ಆರೋಪ ಹೊರಿಸುತ್ತಿದೆ. ಬಿಜೆಪಿಗರ ಎಲ್ಲ ಭ್ರಷ್ಟಾಚಾರ, ಅನಾಚಾರಗಳನ್ನು ಅವರು ಬಯಲಿಗೆಳೆದಿದ್ದಾರೆ. ಮಾತ್ರವಲ್ಲ ಭ್ರಷ್ಟಾಚಾರ ಪ್ರಕರಣಗಳನ್ನು ತಾರ್ಕಿಕ ಅಂತ್ಯ ಕಾಣಿಸಲು ಪ್ರಿಯಾಂಕ್ ಖರ್ಗೆ ಅವರು ಹೋರಾಟ ಮಾಡಿದ್ದಾರೆ. ಪಿಎಸ್ಐ ಹಗರಣ, 40% ಕಮೀಷನ್, ಬಿಟ್‌ಕಾಯಿನ್ ಹಗರಣ, ಕೋವಿಡ್ ಹಗರಣ ಹೀಗೆ ಎಲ್ಲವನ್ನೂ ಬಯಲಿಗೆಳೆದು, ಅವುಗಳನ್ನು ತನಿಖೆಯಾಗುವಂತೆ ಮಾಡಿದ್ದಲ್ಲದೆ ಶಿಕ್ಷೆಯಾಗುವುದಕ್ಕೆ ಅವರು ಕಾರಣರಾಗಿದ್ದಾರೆ. ಅವರು ಕೇವಲ ಗಾಳಿಯಲ್ಲಿ ಗುಂಡು ಹಾರಿಸಿಲ್ಲ. ಪ್ರತಿ ಭ್ರಷ್ಟಾಚಾರವನ್ನೂ ಅಂಕಿ ಅಂಶ, ದಾಖಲೆ ಸಹಿತ ಬೀದಿಗೆ ತಂದರು. ಮತ್ತು ಪ್ರಬಲವಾಗಿ ಹೋರಾಟ ಮಾಡಿದವರು. ಹಾಗಾಗಿ ಅನಗತ್ಯವಾಗಿ ಈಗ ಸಚಿನ್ ಆತ್ಮಹತ್ಯೆ ಪ್ರಕರಣಗಳನ್ನು ಅವರ ತಲೆಗೆ ಕಟ್ಟುವ ಪ್ರಯತ್ನವನ್ನು ಅನಗತ್ಯವಾಗಿ ಮಾಡಲಾಗುತ್ತಿದೆ ಎಂದವರು ದೂರಿದ್ದಾರೆ. ಸಚಿನ್‌ಆತ್ಮಹತ್ಯೆ ಮಾಡಿಕೊಂಡಿರುವ ಕಾರಣ ಏನು ಎಂಬುದನ್ನು ತಿಳಿಯಲು ಸರ್ಕಾರ ಪ್ರಕರಣವನ್ನು ಸಿಐಡಿಗೆ ವಹಿಸಿದೆ. ಇನ್ನು ಈ ಪ್ರಕರಣದಲ್ಲಿ ಪ್ರಿಯಾಂಕ್ ಖರ್ಗೆ ಅವರ ಪಾತ್ರ ಇಲ್ಲ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಅಲ್ಲದೆ ಸಚಿನ್ ಡೆತ್ ನೋಟ್‌ನಲ್ಲಿ ಪ್ರಿಯಾಂಕ್ ಅವರ ಹೆಸರೂ ಇಲ್ಲ. ಆದರೂ ಬಿಜೆಪಿಗರು ರಾಜ್ಯಾದ್ಯಂತ ಬೊಬ್ಬೆ ಹೊಡೆಯತ್ತಿದ್ದಾರೆ. ತನಿಖೆ ನಡೆದು ಅದರ ವರದಿ ಬರಲಿ. ಆಗ ಎಲ್ಲ ಸತ್ಯಾ ಸತ್ಯತೆಯೂ ಹೊರಗೆ ಬರುತ್ತದೆ. ವರದಿ ಬರುವುದಕ್ಕೆ ಮೊದಲೇ ಇವರು ತೀರ್ಪು ಕೊಡುತ್ತಿದ್ದಾರೆ. ಇವರೇ ತನಿಖೆಯನ್ನೂ ಮಾಡಲು ಹೊರಟಿದ್ದಾರೆ. ಇದು ಎಷ್ಟರ ಮಟ್ಟಿಗೆ ಸರಿ? ಬಿಜೆಪಿಗರು ಸುಳ್ಳನ್ನೇ ಸತ್ಯ ಮಾಡಲು ಹೊರಟಿದ್ದಾರೆ. ಇದು ಬಿಜೆಪಿ ಮತ್ತು ಆರ್‌ಎಸ್‌ಎಸ್ ಸಂಸ್ಕೃತಿಯಾಗಿದೆ ಎಂದು ಆರೋಪಿಸಿದ್ದಾರೆ. ಖಂಡಿತವಾಗಿಯೂ ಈ ಹೋರಾಟದಲ್ಲಿ ಅವರಿಗೆ ಫಲ ಸಿಗುವುದಿಲ್ಲ. ಇನ್ನು ಸಚಿನ್ ಅವರು ಗುತ್ತಿಗೆದಾರರೇ ಅಲ್ಲ ಎಂಬ ಅನುಮಾನ ಶುರುವಾಗಿದೆ. ಗುತ್ತಿಗೆದಾರರ ಸಂಘದವರು ಈ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದಾರೆ. ಅದೇನೇ ಇದ್ದರೂ ತನಿಖೆಯಿಂದ ಹೊರಗೆ ಬರುತ್ತದೆ. ಆದರೆ, ಬಿಜೆಪಿಯವರು ಹೆಣದ ಮೇಲೆ ರಾಜಕೀಯ ಮಾಡುವವರು ಎಂಬುದು ಪದೇ ಪದೆ ಸಾಬೀತಾಗುತ್ತಲೆ ಇದೆ. ಅವರು ಹೆಣ ಬೀಳುವುದನ್ನೇ ಕಾಯುತ್ತಾ ಇರುತ್ತಾರೆ. ಎಂದರು

## ರಾಜೀನಾಮೆ ಪಡೆಯಲು ಬ್ಯಾಟರಿ ಇಲ್ಲ – ಕಾಮತ್

ಒಂದನೇ ಪುಟದಿಂದ......

ಕಾಂಗ್ರೆಸ್ ನಾಯಕರುಗಳ, ಆಪ್ತರ ಕಿರುಕುಳ, ಬೆದರಿಕೆಗೆ ಮಣಿದು ಉಸಿರುಗಟ್ಟಿಸುವಂತಹ ವಾತಾವರಣದಲ್ಲಿ ಬದುಕಲಾಗದೇ ಹಲವರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಇದಕ್ಕೆ ಮತ್ತೊಂದು ಉದಾಹರಣೆಯಾಗಿ ಸಚಿವ ಪ್ರಿಯಾಂಕ್‌ಖರ್ಗೆ ಅವರ ಆಪ್ತರ ಕಿರುಕುಳಕ್ಕೆ ಹೆದರಿ ಡೆತ್‌ನೋಟ್ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡ ಬೀದರ್‌ನ ಗುತ್ತಿಗೆದಾರ ಸಚಿನ್ ಪಂಚಾಳ್ ಪ್ರಕರಣವೇ ಸಾಕ್ಷಿ. ಗುತ್ತಿಗೆದಾರ ಸಚಿನ್‌ಅವರು 7 ಪುಟಗಳ ಡೆತ್ ನೋಟ್ ಬರೆದು ಅದನ್ನು ಸಾಮಾಜಿಕ ಜಾಲತಾಣದಲ್ಲೂ ಹಾಕಿದ್ದಾರೆ. ಅದರಲ್ಲಿ ಪ್ರಿಯಾಂಕ್ ಖರ್ಗೆ ಅವರ ಅಪ್ತ ದುಷ್ಟಕೂಟದ ಸದಸ್ಯರು ತನಗೆ ಮಾಡಿದ ಮಹಾ ಮೋಸ, ನೀಡಿದ ಚಿತ್ರಹಿಂಸೆ, ಅಲ್ಲದೇ ಸನಾತನ ಧರ್ಮ ರಕ್ಷಣೆಗೆ ಬದುಕು ಮೀಸಲಿಟ್ಟಿರುವ ಆಂದೋಲ ಸ್ವಾಮೀಜಿ, ಬಿಜೆಪಿ ಮುಖಂಡ ಚಂದು ಪಾಟೀಲ, ಬಿಜೆಪಿ ಶಾಸಕ ಬಸವರಾಜ ಮತ್ತಿಮೂಡ ಸೇರಿದಂತೆ ಹಲವು ಹಿಂದೂ ನಾಯಕರನ್ನು ಸುಪಾರಿ ಕೊಟ್ಟು ಹತ್ಯೆ ಮಾಡುವ ಸಂಚಿನ ಬಗ್ಗೆಯೂ ಉಲ್ಲೇಖಿಸಿದ್ದಾರೆ. ಸಾಯುವ ಅಂತಿಮ ಕ್ಷಣದಲ್ಲಿ ಇಂತಹ ವಿಷಯದಲ್ಲಿ ಯಾವ ವ್ಯಕ್ತಿಯೂ ಸುಳ್ಳು ಹೇಳಲು ಸಾಧ್ಯವೇ? ಇದೊಂದು ಅತ್ಯಂತ ಅತಂಕಕಾರಿ ವಿಷಯವಾಗಿದ್ದುಎಲ್ಲಾ ಆರೋಪಗಳು ಸಚಿವ ಪ್ರಿಯಾಂಕ್ ಖರ್ಗೆಯವರ ಸುತ್ತವೇಗಿರಕಿ ಹೊಡೆಯುತ್ತಿದ್ದು ಈ ಕೂಡಲೇ ನೈತಿಕ ಹೊಣೆ ಹೊತ್ತು ಪ್ರಿಯಾಂಕ ಖರ್ಗೆ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸುತ್ತೇನೆಎಂದರು.

## ನಕಲಿ ಚಿನ್ನ ಹಗರಣ: ಸಿಬ್ಬಂದಿಗಳು ಬಲಿ ಕಾ ಬಕ್ರಾ..?

ಒಂದನೇ ಪುಟದಿಂದ......

ಸಂಘದ ಅಧಿಕಾರಿಗಳು ಸಹಕಾರಿ ಸಂಘದ ಕಳೆದ ಐದು ವರ್ಷಗಳ ಪ್ರಗತಿಯ ವಿವರ ನೀಡಲು ಬಂದಿದ್ದರು. ಬ್ಯಾಂಕ್‌ನ ಅಧ್ಯಕ್ಷರಾಗಲಿ, ಆಡಳಿತ ಮಂಡಳಿಯವರಾಗಲಿ ಭಾಗವಹಿಸದಿರುವ ಬಗ್ಗೆ ಸುದ್ದಿಗಾರರು ಬ್ಯಾಂಕ್ ಸಿಬ್ಬಂದಿಗಳನ್ನು ತರಾಟೆಗೈದಾಗ, ಮುಂದೆ ಅವರು ಬರುತ್ತಾರೆ ಎಂದು ಅಧಿಕಾರಿಗಳು ನಿಸ್ಸಹಾಯಕರಾಗಿ ಹೇಳುತ್ತಿರುವುದು ನೋಡಿದಾಗ ಹೇಗಾದರೂ ಮಾಡಿ ಸಂಸ್ಥೆಯನ್ನು ಉಳಿಸಿಕೊಳ್ಳಬೇಕು ಎನ್ನುವಂತಿತ್ತಾದರೂ, ಅಮಾಯಕರಲ್ಲ ಎನ್ನುವುದು ತಿಳಿಯುತ್ತಿತ್ತು. ಪಡೀಲ್ ಶಾಖೆಯಲಿ ಪುತ್ತೂರಿನ ಅಬೂಬಕರ್ ಸಿದ್ದೀಕ್ ಎಂಬಾತ ಚಿನ್ನ ಲೇಪಿತ ಆಭರಣಗಳನ್ನು ಅಡವಿರಿಸಿ 2.11 ಕೋಟಿರೂ. ಸಾಲ ಪಡೆದಿದ್ದರು. ಹರಾಜು ಪ್ರಕ್ರಿಯೆ ಹಾಗೂ ಪ್ರಕರಣದ ಆರೋಪಿಗಳಲ್ಲಿ ಓರ್ವರಾದ ಅಬೂಬಕರ್ ಸಾಲವನ್ನು ಮಾಡಿಕೊಂಡು ಬ್ಯಾಂಕ್‌ಗೆ ಬರಬೇಕಾಗಿದ್ದ ಹಣವನ್ನು ಸಂಪೂರ್ಣವಾಗಿ ಜಮಾ ಮಾಡಲಾಗಿದೆ. ನಕಲಿ ಚಿನ್ನಾಭರಣ ಇರಿಸಿದ್ದ ಆರೋಪಿಯ ವಿರುದ್ಧ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣದಾಖಲಿಸಲಾಗಿದ್ದು, ಆತ ತಲೆಮರೆಸಿಕೊಂಡಿದ್ದಾನೆ ಎಂದು ಅವರು ಹೇಳಿದರಾದರೂ. ಬ್ಯಾಂಕ್ ನ ಬಾಕಿ ಹಣಕ್ಕಾಗಿ ಒಂದು ಕಡೆ ಸರಫರಿಗೆ ಕೋಟಿಯಷ್ಟು ಬ್ಯಾಂಕಿನಿಂದ ಸಾಲ ನೀಡಿದ್ದಲ್ಲದೆ, (ಸರಫರು ಆ ಕೋಟಿ ಸಾಲಕ್ಕೆ ಎಷ್ಟು ಚಿನ್ನ ಅಥವಾ ಜಮೀನು ಅಡವಿಟ್ಟಿದ್ದಾರೆ ಗೊತ್ತಿಲ್ಲ) ಸಿಬ್ಬಂದಿಗಳ ವೇತನದ ಎರಿಯರ್ಸ್‌ನ್ನೂ ಬಳಸಲಾಗಿರುವ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಆಡಳಿತ ಮಂಡಳಿಯ ಸಭೆಯ ನಿರ್ಣಯದಂತೆ ಬ್ಯಾಂಕ್‌ಗಾಗಿ ಸಿಬ್ಬಂದಿ ತಮ್ಮ ಐದು ತಿಂಗಳ ಎರಿಯರ್ಸ್ ಹಣವನ್ನು ತ್ಯಾಗ ಮಾಡಿದ್ದಾರೆ ಎಂದರು. ಇಲ್ಲಿ ಮತ್ತೆ ಸಿಬ್ಬಂದಿಗಳು ಬಲಿ ಕಾ ಬಕ್ರಾ ಆಗಿರುವುದಂತೂ ನಿಜ. ಇದಕ್ಕೂ ಮುಂಚಿನ ಹಲವಾರು ಕೇಸುಗಳು ಕೋರ್ಟಿನಲ್ಲಿ ಇರುವುದಾಗಿ ಸಿಬ್ಬಂದಿಗಳು ಒಪ್ಪಿಕೊಂಡರು. ಪುತ್ತೂರಿನಿಂದ ಒಬ್ಬ ಮನುಷ್ಯ ಮಂಗಳೂರಲ್ಲಿ ಸಾಲ ತೆಗೆದುಕೊಳ್ಳುವುದು ತಪ್ಪಲ್ಲವಾದರೂ, ಪುತ್ತೂರಿನ ಶಾಖೆಯಲ್ಲಿ ನಕಲಿ ಚಿನ್ನ ಒತ್ತೆ ಇಡುವುದು ಸಾಧ್ಯವಿಲ್ಲ ಎನ್ನುವುದು ತಿಳಿದಿರಬೇಕು. ಅಲ್ಲಿಂದ ಬಂಟ್ವಾಳದ ಪ್ರಧಾನ ಕಚೇರಿಗಾದರೂ ಹೋಗಬಹುದಿತ್ತು. ಅದು ನಡೆದಿಲ್ಲ. ಎಂದರೆ ಎಲ್ಲವೂ ಯೋಜನೆ ಪ್ರಕಾರವೇ ನಡೆದಿದೆ ಎನ್ನುವುದು ಇಲ್ಲಿ ಖಾತೆ ಹೊಂದಿರುವವರ ಮಾತು. ಇನ್ನು ಸಾಲ ವಸೂಲಾತಿ ಆಗಿದೆ ಎಂದು ಓಲೆ ಕಳುಹಿಸಿರುವ ಆಡಳಿತ ಮಂಡಳಿ ಈ ನಕಲಿ ಚಿನ್ನ ಅಡವಿಟ್ಟು ಸಾಲ ಪಡೆದ ಆರೋಪಿತನ ಮೇಲೆ ದೂರು ಕೊಡುವುದಕ್ಕೂ ಹಿಂದೆ ಮುಂದೆ ನೋಡಿರುವುದನ್ನಿಲ್ಲಿ ನೆನಪಿಸಿಕೊಳ್ಳಬಹುದು. ಇನ್ನು ಕೆಲವೇ ತಿಂಗಳುಗಳಲ್ಲಿ ಚುನಾವಣೆ ಬೇರೆ ಇದ್ದು, ಚುನಾವಣೆಯ ಸಲುವಾಗಿ ಅಧಿಕಾರಕ್ಕಾಗಿ ಸೆಣಸುತ್ತಿರುವ ಇನ್ನೊಂದು ಟೀಮು ಈಗಿನ ಆಡಳಿತ ಮಂಡಳಿಯ ಮೇಲೆ ಗುಬೆ ಕೂರಿಸುತ್ತಿದೆ ಎಂಬ ಆರೋಪ ಆಡಳಿತ ಮಂಡಳಿಯದ್ದು. ಅಂತೂ ಇಂತೂ ಅಮ್ಮೆಂಬಳ ಬಾಳಪ್ಪ, ಹೂವಯ್ಯರಂತಹ ಹಿರಿಯರು ಯಾವ ಕಾರಣಕ್ಕಾಗಿ ಸಂಘವನ್ನು ಕಟ್ಟಿ ಬೆಳೆಸಿದ್ದಾರೋ ಅದು ಫಲಿಸದೇ, ಹಗರಣಗಳಲ್ಲಿಯೇ ಸಮಾಜ ಸೇವಾ ಸಹಕಾರಿ ಸಂಘದ ಹೆಸರು ವಾಸಿಯಾಗುತ್ತಿರುವುದು ವಿಪರ್ಯಾಸವೇ ಸರಿ.

## ವಿಕಲಚೇತನರ ಬಸ್‌ಪಾಸ್ ನವೀಕರಣ

ಮಂಗಳೂರು – 2024ನೇ ಸಾಲಿನಲ್ಲಿ ವಿತರಿಸಿರುವ ಮಂಗಳೂರು ವಿಭಾಗ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಸಕಾಲ ಸಂಬಂಧಿತ ಸೇವೆಯಾದ ವಿಕಲಚೇತನರ ರಿಯಾಯಿತಿ ಬಸ್ಸುಪಾಸುಗಳ ಅವಧಿಯು ಮುಕ್ತಾಯಗೊಂಡಿದ್ದು, 2025ನೇ ಸಾಲಿಗಾಗಿ ಬಸ್ಸು ಪಾಸುಗಳನ್ನು ನವೀಕರಿಸಲು ಕ್ರಮಕೈಗೊಳ್ಳಲಾಗಿದೆ. ವಿಕಲಚೇತನರ ರಿಯಾಯಿತಿ ಬಸ್ಸು ಪಾಸುಗಳನ್ನು ಫಲಾನುಭವಿಗಳು ನವೀಕರಿಸಿಕೊಳ್ಳಲು ಅನುಕೂಲವಾಗುವಂತೆ ಕಾಲಮಿತಿ ನೀಡುವ ಉದ್ದೇಶದಿಂದ 2024ನೇ ಸಾಲಿನಲ್ಲಿ ವಿತರಿಸಿದ ಪಾಸುಗಳು ಫೆಬ್ರವರಿ 28 ರವರೆಗೆ ಮಾನ್ಯವಾಗಿರುತ್ತದೆ. ವಿಕಲಚೇತನರ ರಿಯಾಯಿತಿ ಪಾಸುಗಳನ್ನು ಪಡೆಯಲು ಸೇವಾಸಿಂಧು ಪೋರ್ಟಲ್ https://sevasindhuservices.karnataka.gov.in ಮೂಲಕ ಅರ್ಜಿ ಸಲ್ಲಿಸಬೇಕು.

## ಅಲ್ಪಸಂಖ್ಯಾತರ ಹಾಸ್ಟೆಲ್ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮಂಗಳೂರು–2024–25ನೇ ಶೈಕ್ಷಣಿಕ ಸಾಲಿನ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧೀನದ ಮೆಟ್ರಿಕ್ ನಂತರದ ಬಾಲಕ/ ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ (ಪಿ.ಯು.ಸಿ, ಪದವಿ, ಸ್ನಾತಕೋತ್ತರ) ಕೋರ್ಸುಗಳ ವಿದ್ಯಾರ್ಥಿಗಳಿಗೆ ರಾಜ್ಯ ವಿದ್ಯಾರ್ಥಿನಿಲಯ ತಂತ್ರಾಂಶದಲ್ಲಿ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಲಾಗಿದೆ. ಎಸ್.ಎಚ್.ಪಿ (ರಾಜ್ಯ ಹಾಸ್ಟೆಲ್ ಪೋರ್ಟಲ್) https://shp.karnataka.gov.in/ ಮೂಲಕ ಆನ್‌ಲೈನ್ ಅರ್ಜಿಯನ್ನು ಸಲ್ಲಿಸಬೇಕು. ಅರ್ಜಿ ಸಲ್ಲಿಸಲು ಜನವರಿ 10 ಕೊನೆಯ ದಿನ. ಹೆಚ್ಚಿನ ಮಾಹಿತಿಗೆ ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಧಿಕೃತ ಜಾಲತಾಣ https://dom.karnataka.gov.in ಅಥವಾ ಹತ್ತಿರದ ಜಿಲ್ಲಾ ಮತ್ತು ತಾಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರಗಳಿಗೆ ಸಂಪರ್ಕಿಸುವಂತೆ ಜಿಲ್ಲಾ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪಿಎಚ್‌ಡಿ ಫೆಲೋಶಿಪ್‌ಗೆ ಅರ್ಜಿ ಆಹ್ವಾನ

ಶಿವಮೊಗ್ಗ : ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಕರ್ನಾಟಕ ರಾಜ್ಯದ ಹಿಂದುಳಿದ ವರ್ಗಗಳ ಪ್ರವರ್ಗ–1 2(ಎ), 3(ಎ) ಹಾಗೂ 3(ಬಿ)ಗೆ ಸೇರಿದ ಪಿಎಚ್‌ಡಿ ಅಧ್ಯಯನ ಪ್ರಾರಂಭಿಸಿರುವ ಅರ್ಹ ವಿದ್ಯಾರ್ಥಿಗಳಿಂದ ಮಾಸಿಕ ವ್ಯಾಸಂಗ ವೇತನ /ಫೆಲೋಶಿಪ್‌ಗಾಗಿ ಅರ್ಜಿ ಆಹ್ವಾನಿಸಲಾಗಿದೆ. ವಿದ್ಯಾರ್ಥಿಗಳಿಗೆ ಆನ್‌ಲೈನ್ ಅರ್ಜಿ ಪ್ರತಿಯೊಂದಿಗೆ ಒಂದು ಸೆಟ್ ಅಧಿಕೃತ ದಾಖಲೆಗಳನ್ನು ಸಂಬಂಧಪಟ್ಟ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ https://www. bcwd. karnataka.gov.in, ಸಹಾಯವಾಣಿ : 8050770004 ಹಾಗೂ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ಕಚೇರಿ ದೂ. ಸಂ: 08182–222129ನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನಗರ ಸಭೆಯ ಸಾಮಾನ್ಯ ಸಭೆಯಲ್ಲಿ ಏಕಾಂಗಿ ಪ್ರತಿಭಟನೆ !



ಉಳ್ಳಾಲ: ನಗರ ಸಭೆ ವ್ಯಾಪ್ತಿಯ 18ನೇ ಗಂಡಿ ವಾರ್ಡ್ ನ ಯಾವುದೇ ಅಭಿವೃದ್ಧಿ ಕಾಮಗಾರಿ ಆಗಲಿಲ್ಲ.ಅಭಿವೃದ್ಧಿಗೆ ಅನುದಾನ ಬಿಡುಗಡೆ ಮಾಡಲಿಲ್ಲ ಎಂದು ಆರೋಪಿಸಿ ನಗರ ಸಭೆ ಸದಸ್ಯ ದಿನಕರ್ ಉಳ್ಳಾಲ ಅವರು ಪ್ರತಿಭಟನೆ ನಡೆಸಿ ಸಭಾತ್ಯಾಗ ಮಾಡಿದ ಘಟನೆ ಉಳ್ಳಾಲ ನಗರ ಸಭೆ ಸಾಮಾನ್ಯ ಸಭೆಯಲ್ಲಿ ನಡೆಯಿತು. ನಗರ ಸಭೆ ಅಧ್ಯಕ್ಷ ಶಶಿಕಲಾ ಅವರ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಅನುದಾನ ಹಾಗೂ ಅಭಿವೃದ್ಧಿ ಕಾಮಗಾರಿ ಬಗ್ಗೆ ಪ್ರಸ್ತಾಪಗೊಂಡ ಸಂದರ್ಭದಲ್ಲಿ ಆಕ್ರೋಶಗೊಂಡ ಸದಸ್ಯ ದಿನಕರ್ ಉಳ್ಳಾಲ ಅಧ್ಯಕ್ಷರ ಟೇಬಲ್ ಮುಂದೆ ಜಮಾಯಿಸಿ ಕಪ್ಪು ಪಟ್ಟಿ ಧರಿಸಿ 'ಕ್ಷಮಿಸಿ ಗಾಂಧೀಜಿ, ನಾನು ಈಗಲೂ ಗುಲಾಮ' ಎಂದು ಬರೆದ ಫಲಕ ಏಕಾಂಗಿಯಾಗಿ ಪ್ರತಿಭಟನೆ ನಡೆಸಿದರು.

## ಶ್ವಾನ ಪ್ರದರ್ಶನ–ಯುವ ಮನ ಮ್ಯೂಸಿಕಲ್ ನೈಟ್



ಮಂಗಳೂರು : ದ.ಕ. ಜಿಲ್ಲೆಯಲ್ಲಿ ನಡೆಯುತ್ತಿರುವ ಕರಾವಳಿ ಉತ್ಸವದ ಭಾಗವಾಗಿ ಜಿಲ್ಲಾಡಳಿತವು ಕದ್ರಿ ಉದ್ಯಾನವನದಲ್ಲಿ ಯುವ ಮನ ಹಾಗೂ ಶ್ವಾನ ಪ್ರದರ್ಶನವನ್ನು ಆಯೋಜಿಸಲಾಗಿದೆ ಎಂದು ಎಂದು ಜಿಲ್ಲಾಧಿಕಾರಿ ಮುಲ್ಲೈ ಮುಗಿಲನ್ ತಿಳಿಸಿದರು. ಜಿಲ್ಲಾಧಿಕಾರಿ ಕಚೇರಿಯಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ಕರಾವಳಿ ಉತ್ಸವ ಮೈದಾನ ದಲ್ಲಿ ಪ್ರದರ್ಶನ ಮೇಳ, ಕದ್ರಿ ಪಾರ್ಕ್‌ನಲ್ಲಿನ ರೊಬೊಟಿಕ್ ಬಟರ್‌ಫ್ಲೈ ಶೋ ಸೇರಿಂದಂತೆ ಕರಾವಳಿ ಉತವ ಉತ್ತಮ ಆಕರ್ಷಣೆ ಪಡೆದಿದೆ. ಇದೀಗ ಜನವರಿ 5 ಮತ್ತು 6ಕ್ಕೆ ಶ್ವಾನ ಪ್ರದರ್ಶನ, ಯುವ ಮನ ಹಾಗೂ ಚಲನಚಿತ್ರೋತ್ಸವದ ಮೂಲಕ ಕರಾವಳಿ ಉತ್ಸವಕ್ಕೆ ಇನ್ನಷ್ಟು ಮೆರುಗು ನೀಡುವ ಪ್ರಯತ್ನ ನಡೆಯುತ್ತಿದೆ ಎಂದವರು ಹೇಳಿದರು.

## ದುಶ್ಚಟದಿಂದ ದೇಶ ಮುಕವಾಗಬೇಕು : ಯು. ಟಿ. ಖಾದರ್




ಉಳ್ಳಾಲ :ಮಾದಕ ದ್ರವ್ಯ ದುಶ್ಚಟದಿಂದ ದೇಶ ಮುಕ್ತವಾಗಬೇಕು. ಇದನ್ನು ನಿರ್ಮೂಲನೆ ಮಾಡುವ ಮೂಲಕ ಸ್ವಸ್ಥ ಸಮಾಜ ನಿರ್ಮಾಣ ಮಾಡಬೇಕಾದ ಜವಾಬ್ದಾರಿ ನಮ್ಮದು. ಸಮಾಜವನ್ನು ಜೋಡಿಸುವ ಕೆಲಸ ನಮ್ಮಿಂದ ಆಗಬೇಕೇ ಹೊರತು ವಿಭಜಿಸುವ ಕೆಲಸ ಆಗಬಾರದು ಎಂದು ಸ್ಪೀಕರ್ ಯುಟಿ ಖಾದರ್ ಹೇಳಿದರು. ದಿಕ್ಸೂಚಿ ಭಾಷಣ ಮಾಡಿದ ವಿವಿ ಉಪಕುಲಪತಿ ಪ್ರೊ ಧರ್ಮ ಅವರು, ಮಾದಕವಸ್ತುಗಳ ಜಾಲದಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಇದ್ದಾರೆ. ಇದು ಗಂಭೀರ ವಿಚಾರ ಆಗಿದ್ದು, ಇದನ್ನು ನಿವಾರಣೆ ಮಾಡುವ ಕೆಲಸ ಆಗಬೇಕು.ಬೆಂಗಳೂರಿನಲ್ಲಿ ಈ ಜಾಲ ವ್ಯಾಪಕವಾಗಿ ಬೆಳೆದಿದೆ. ಈಗ ಮಂಗಳೂರು ಕೂಡ ಈ ಜಾಲದಲ್ಲಿ ಬೆಳೆದಿದ್ದು, ಬೆಂಗಳೂರನ್ನು ಮೀರಿ ನಿಂತಿದೆ ಎಂದು ಹೇಳಿದರು. ನಾಟೆಕಲ್ ನಾಗರಿಕ ರಕ್ಷಣಾ ವೇದಿಕೆಯ ಗೌರವಾಧ್ಯಕ್ಷ ಪಿ.ಎಸ್.ಮೊಯ್ದಿನ್ ಮಾದಕ ದ್ರವ್ಯದಿಂದ ಆಗುವ ತೊಂದರೆಗಳ ಬಗ್ಗೆ ಮಾಹಿತಿ ನೀಡಿದರು.

## ಬಜೆ ಅಣೆಕಟ್ಟು ಕುಡಿಯುವ ನೀರಿನ ಮಟ್ಟ ಪರಿಶೀಲನೆ



ಉಡುಪಿ : ಉಡುಪಿ ನಗರಸಭೆಯ ಕುಡಿಯುವ ನೀರಿನ ಬಜೆ ಅಣೆಕಟ್ಟು ಪ್ರದೇಶಕ್ಕೆ ಉಡುಪಿ ಶಾಸಕ ಯಶ್‌ಪಾಲ್ ಸುವರ್ಣ ಹಾಗೂ ನಗರಸಭೆ ಅಧ್ಯಕ್ಷ ಪ್ರಭಾಕರ ಪೂಜಾರಿ ಭೇಟಿ ನೀಡಿ ನೀರಿನ ಸಂಗ್ರಹ ಮಟ್ಟವನ್ನು ಪರಿಶೀಲಿಸಿ ಅಧಿಕಾರಿಗಳೊಂದಿಗೆ ಮಾಹಿತಿ ಪಡೆದರು. ಬಜೆ ಅಣೆಕಟ್ಟು ನೀರಿನ ಸಂಗ್ರಹ ಸಾಮರ್ಥ್ಯ, ಒಳಹರಿವು ಬಗ್ಗೆ ಚರ್ಚೆ ನಡೆಸಿ ಬೇಸಿಗೆ ಕಾಲದಲ್ಲಿ ನಗರದ ನೀರು ಸರಬ ರಾಜಿಗೆ ತೊಂ ದರೆಯಾಗದಂತೆ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ವಾರಾಹಿ ಯೋಜನೆಯ ನೀರು ಸರಬರಾಜು ಪ್ರಕ್ರಿಯೆ ಅಂತಿಮ ಹಂತದಲ್ಲಿದ್ದು ಕುಡಿಯುವ ನೀರಿನ ಸಮಸ್ಯೆ ಪರಿಹಾರ ದೊರೆತರೂ ಬಜೆ ಅಣೆಕಟ್ಟಿನ ನೀರು ಸರಬರಾಜಿಗೆ ಕೂಡ ಆದ್ಯತೆ ನೀಡಬೇಕು ಎಂದು ಅವರು ತಿಳಿಸಿದರು.

## ಬಸ್ ಪ್ರಯಾಣಿಕೆಗೆ ಆದ ನಷ್ಟಕ್ಕೆ 1 ಲಕ್ಷ ರೂ. ಪರಿಹಾರ



ಮಂಗಳೂರು : ಬಸ್‌ನಲ್ಲಿ ತಿಗಣೆ ಕಾಟದಿಂದ ತೊಂದರೆಗೊಳಗಾದ ಬಸ್ ಪ್ರಯಾಣಿಕೆಗೆ 1 ಲಕ್ಷ ರೂ. ಪರಿಹಾರ ನೀಡುವಂತೆ ಸೀಬರ್ಡ್ ಟೂರಿಸ್ಟ್ ಸಂಸ್ಥೆಗೆ ದ.ಕ. ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಆಯೋಗವು ಆದೇಶ ನೀಡಿದೆ. ಬಸ್‌ನಲ್ಲಿ ಪ್ರಯಾಣದ ವೇಳೆ ತೊಂದರೆಗೊಳಗಾಗಿದ್ದ ಪಾವೂರಿನ ದೀಪಿಕಾ ಸುವರ್ಣರಿಗೆ ಪರಿಹಾರ ಧನ ನೀಡುವಂತೆ ಆಯೋಗವು ತೀರ್ಪು ನೀಡಿದೆ. ದೀಪಿಕಾ ಸುವರ್ಣ ಮಂಗಳೂರಿನಿಂದ ಬೆಂಗಳೂರಿಗೆ ಬಸ್‌ನಲ್ಲಿ ಪ್ರಯಾಣಿಸಲು ಬೆಂಗಳೂರಿನ ರೆಡ್‌ಬಸ್ ಆನ್‌ಲೈನ್ ಎಪಿಪಿ, ಇಬಿಬೋ ಗ್ರೂಪ್ ಪ್ರೈ.ಲಿ.ಮೂಲಕ ಟಿಕೆಟ್ ಕಾಯ್ದಿರಿಸಿದ್ದರು. ಅದರಂತೆ ರಾತ್ರಿ ಬಸ್ ಹತ್ತಿದ ಅವರಿಗೆ ಬಸ್‌ನ ಸ್ಲೀಪರ್ ಕೋಚ್‌ನಲ್ಲಿ ವಿಪರೀತ ತಿಗಣೆ ಕಡಿತದ ಅನುಭವ ಉಂಟಾಯಿತು. ಬಸ್‌ನ ನಿರ್ವಾಹಕರ ಗಮನಕ್ಕೆ ತಂದರೂ ಫಲಕಾರಿಯಾಗಲಿಲ್ಲ.

## ಸಾಸ್ತಾನ ಟೋಲ್‌ಗೇಟ್ : ವಾಹನಗಳಿಗೆ ವಿನಾಯಿತಿ



ಉಡುಪಿ : ಕೋಟ ಜಿಲ್ಲಾ ಪಂಚಾಯತ್ ವ್ಯಾಪ್ತಿಯ 1552 ಸ್ಥಳೀಯ ವಾಹನಗಳು 53,130ಕ್ಕೂ ಹೆಚ್ಚು ಬಾರಿ ಸಾಸ್ತಾನ ಟೋಲ್ ಗೇಟ್ ಮೂಲಕ ಸಂಚರಿಸುತ್ತವೆ. ಇವೆಲ್ಲವಕ್ಕೂ ಟೋಲ್ ಸುಂಕ ವಿನಾಯಿತಿ ನೀಡಬೇಕೆಂದು ಸ್ಥಳೀಯ ಜನರ ಬೇಡಿಕೆ ಇದೆ. ಈ ವ್ಯಾಪ್ತಿಯ ಸ್ಥಳೀಯ ಸ್ವಂತ ಖಾಸಗಿ ವಾಹನಗಳಿಗೆ ಹಾಗೂ ಸಣ್ಣ ವಾಣಿಜ್ಯ ವಾಹನಗಳಿಗೆ ವಿನಾಯಿತಿ ಹಿಂದಿನಂತೆ ನೀಡಲಾಗುವುದು. ಆದರೆ ಲಾರಿ, ಬಸ್ಸು, ಟಿಪ್ಪರ್ ಸೇರಿದಂತೆ ಭಾರಿ ವಾಹನಗಳು ರಿಯಾಯಿತಿ ಪಾಸ್ ಪಡೆದು ಸಂಚರಿಸಬಹುದಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿದ್ಯಾಕುಮಾರಿ ತಿಳಿಸಿದ್ದಾರೆ. ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಸಾಸ್ತಾನ ಟೋಲ್‌ಗೇಟ್‌ನಲ್ಲಿ ಸ್ಥಳೀಯ ಜನತೆಯ ವಾಹನಗಳಿಗೆ ಈ ಹಿಂದೆ ನೀಡುತ್ತಿದ್ದಂತೆ ರಿಯಾಯಿತಿಯನ್ನು ಕಲ್ಪಿಸಬೇಕೆಂದು ಸಭೆಯ ಅಧ್ಯಕ್ಷತೆ ವಹಿಸಿದ್ದ ಉಡುಪಿ– ಚಿಕ್ಕಮಗಳೂರು ಲೋಕಸಭಾ ಸದಸ್ಯ ಕೋಟ ಶ್ರೀನಿವಾಸ ಪೂಜಾರಿ ಗುತ್ತಿಗೆದಾರರಿಗೆ ಸೂಚಿಸಿದರು.

## ಭೀಮಾ ಕೊರೆಗಾವ್ ಕದನ ದಲಿತರಿಗೆ ಮಾದರಿ



ಉಡುಪಿ : ಹಿಂದುತ್ವದ ಲೂಟಿಕೋರರಿಂದ ಸೃಷ್ಟಿಯಾಗಿರುವ ಸಂವಿಧಾನ ಮತ್ತು ಅಂಬೇಡ್ಕರ್ ವಿರೋಧಿಗಳಿಗೆ ಕೊರೆಗಾವಿನಲ್ಲಿ ಕರ್ಮಠ ಮನುವಾದಿ ಬ್ರಾಹ್ಮಣ ಪೇಶ್ವೆ ಸೈನ್ಯದ ವಿರುದ್ಧ ದಲಿತ ಮಹಾರ್ ಸೈನಿಕರು ಯುದ್ಧ ಹೂಡಿ ದಿಗ್ವಿಜಯ ಸಾಧಿಸಿದ ಕದನವು ಪ್ರಸ್ತುತ ದಲಿತರಿಗೆ ಮಾದರಿಯಾಗ ಬೇಕಾಗಿದೆ ಎಂದು ಜನಪರ ಹೋರಾಟಗಾರ ಜಯನ್ ಮಲ್ಪೆ ಹೇಳಿದ್ದಾರೆ.

## ಮಂಗಳೂರು ಸ್ಟ್ರೀಟ್ ಫುಡ್ ಫಿಯೆಸ್ಟ ಸೀಸನ್–3



ಮಂಗಳೂರು: ಶ್ರೀ ನಳಿನ್ ಕುಮಾರ್ ಕಟೀಲ್ ಮಾರ್ಗದರ್ಶನ ಹಾಗೂ ಮಂಗಳೂರು ನಗರ ದಕ್ಷಿಣ ಶಾಸಕರಾದ ಶ್ರೀ ಡಿ.ವೇದವ್ಯಾಸ ಕಾಮತ್ ರವರ ನೇತೃತ್ವದ ಕುಡ್ಲ ಸಾಂಸ್ಕೃತಿಕ ಪ್ರತಿಷ್ಠಾನ ಹಾಗೂ ಜಿಲ್ಲಾಡಳಿತದ ಸಹಕಾರದೊಂದಿಗೆ ಬಹು ನಿರೀಕ್ಷಿತ ಮಂಗಳೂರು ಸ್ಟ್ರೀಟ್ ಫುಡ್ ಫಿಯೆಸ್ಟ ಸೀಸನ್–3 ಇದೇ 2025ರ ಜನವರಿ 18ರಿಂದ 22ರವರೆಗೆ ಐದು ದಿನಗಳ ಕಾಲ ನಡೆಯಲಿದೆ. ಜನವರಿ 18ರ ಸಂಜೆ ಜಿಲ್ಲೆಯ ಹಲವು ಗಣ್ಯ ಅತಿಥಿ ಗಳಿಂದ ಸೀಸನ್–3ಗೆ ಅಧಿಕೃತ ಚಾಲನೆ ದೊರೆಯಲಿದ್ದು ಕರಾವಳಿ ಉತ್ಸವ ಮೈದಾನದಿಂದ ನಾರಾಯಣ ಗುರು ವೃತ್ತ, ಮಣ್ಣಗುಡ್ಡ ಗುರ್ಜಿ ವೃತ್ತ, ಕೆನರಾ ಉರ್ವ"ದವರೆಗೆ ಪ್ರತಿ ನಿತ್ಯ ಸಂಜೆ 4ರಿಂದ ರಾತ್ರಿ 10ರವರೆಗೆ ಈ 'ಆಹಾರೋತ್ಸವ' ನಡೆಯಲಿದೆ ಎಂದು ಕುಡ್ಲ ಸಾಂಸ್ಕೃತಿಕ ಪ್ರತಿಷ್ಠಾನದ ಅಧ್ಯಕ್ಷರಾದ ಗಿರಿದರ್ ಶೆಟ್ಟಿ ಮಾಹಿತಿ ನೀಡಿದರು.

## ತುಳು ಕ್ಯಾಲೆಂಡರ್ ಬಿಡುಗಡೆಗೊಳಿಸಿದ ಯು. ಟಿ. ಖಾದರ್



ಮಂಗಳೂರು : ತುಳು ತಿಂಗಳುಗಳ ಹೆಸರಿನೊಂದಿಗೆ ತುಳುನಾಡಿನ ಹಬ್ಬ ಹರಿದಿನಗಳ ಮಾಹಿತಿಯುಳ್ಳ 'ತುಳು ಕಾಲ ಕೋಂದೆ' ತುಳು ಕ್ಯಾಲೆಂಡರನ್ನು ಶನಿವಾರದಂದು ವಿಧಾನಸಭಾ ಸ್ಪೀಕರ್ ಯು.ಟಿ.ಖಾದರ್ ಅವರು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ತಾರಾನಾಥ್ ಗಟ್ಟಿ ಕಾಪಿಕಾಡ್, ಕೊಂಕಣಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಸ್ಟ್ಯಾನಿ ಆಳ್ವಾರೀಸ್, ಬ್ಯಾರಿ ಅಕಾಡೆಮಿ ಅಧ್ಯಕ್ಷ ಉಮರ್ ಯು.ಹೆಚ್, ಸೋಮೇಶ್ವರ ಪುರಸಭೆ ಸದಸ್ಯ ದೀಪಕ್ ಪಿಲಾರ್ ಉಪಸ್ಥಿತರಿದ್ದರು. 'ತುಳು ಕಾಲ ಕೋಂದೆ' ಹೆಸರಿನಲ್ಲಿ ಕಳೆದ 12 ವರ್ಷಗಳಿಂದ ತುಳು ಕ್ಯಾಲೆಂಡರ್ ಪ್ರಕಟಿಸುತ್ತಿರುವ ಪ್ರವೀಣ್ ರಾಜ್ ಎಸ್.ರಾವ್ ಹಾಗೂ ಅವರ ಬಳಗ ದವರಾದ ಉದಯಾನಂದ ಬರ್ಕೆ, ವಿವೇಕ್ ಆಚಾರ್ಯ ಈ ಸಂದರ್ಭದಲ್ಲಿ ಭಾಗವಹಿಸಿದ್ದರು.

## ಮಂಗಳೂರು ಬಂದರಿಗೆ ಸೆವೆನ್ ಸೀಸ್ ವಾಯೇಜರ್ ಕ್ರೂಸ್



ಮಂಗಳೂರು : ಸರಿ ಸುಮಾರು 650 ಮಂದಿ ಪ್ರವಾಸಿಗರನ್ನು ಹೊತ್ತ ಸೆವೆನ್ ಸೀಸ್ ವಾಯೇಜರ್ ಕ್ರೂಸ್ ಹಡಗು ಶುಕ್ರವಾರ ನವ ಮಂಗಳೂರು ಬಂದರಿಗೆ ಆಗಮಿಸಿತು. ಪ್ರಸಕ್ತ ಋತುವಿನ ಎರಡನೇ ಕ್ರೂಸ್ ಹಡಗು ಇದಾಗಿದ್ದು,ಕರಾವಳಿಯ ಶ್ರೀಮಂತ ಸಂಸ್ಕೃತಿ ಮತ್ತು ಪರಂಪರೆಯನ್ನು ಪ್ರತಿಬಿಂಬಿಸುವ ಸಾಂಪ್ರದಾಯಿಕ ಭಾರತೀಯ ಆತಿಥ್ಯದೊಂದಿಗೆ ಪ್ರಯಾಣಿಕರನ್ನು ಆತ್ಮೀಯವಾಗಿ ಸ್ವಾಗತಿಸಲಾಯಿತು. ನಂತರ ಪ್ರವಾಸಿಗರಿಗೆ ಕಾರ್ಕಳ ಗೋಮಟೇಶ್ವರ ಬಸದಿ, ಸಾವಿರ ಕಂಬದ ಬಸದಿ, ಸೋನ್ಸ್ ಫಾರ್ಮ್, ಕಲಭಾವಿ ಗೋಡಂಬಿ ಕಾರ್ಖಾನೆ, ಗೋಕರ್ಣನಾಥ ದೇವಸ್ಥಾನ ಮತ್ತು ಸ್ಥಳೀಯ ಮಾರುಕಟ್ಟೆಗೆ ಭೇಟಿ ನೀಡಲು ವ್ಯವಸ್ಥೆ ಮಾಡಲಾಯಿತು. ಸೆವೆನ್ ಸೀಸ್ ವಾಯೇಜರ್ ಐಶ್ವರ್ಯ ಮತ್ತು ವಿಶ್ವ ದರ್ಜೆಯ ಪ್ರಯಾಣವನ್ನು ಒಳಗೊಂಡಿದೆ. 206.5 ಮೀಟರ್ ಉದ್ದದ ಕ್ರೂಸ್ ಹಡಗು, ಫುಜೈರಾದಿಂದ ಕೊಲಂಬೊಗೆ ಮುಂಬೈ, ಗೋವಾ, ನವ ಮಂಗಳೂರು ಮತ್ತು ಕೊಚ್ಚಿನ್ ಮೂಲಕ ತನ್ನ ಪ್ರಯಾಣದ ಭಾಗವಾಗಿ ಅರಬ್ಬಿ ಸಮುದ್ರವನ್ನು ನ್ಯಾವಿಗೇಟ್ ಮಾಡುತ್ತಿದೆ.

## ಮೂಡುಬಿದಿರೆಯಲ್ಲಿ ಕಂಬಳ ಸಮಿತಿ ಸಭೆ



ಮೂಡುಬಿದಿರೆ: ಇಲ್ಲಿನ ಒಂಟಿಕಟ್ಟೆ ಕಡಲಕೆರೆ ನಿಸರ್ಗಧಾಮದಲ್ಲಿ ಜನವರಿ 25ರಂದು 22ನೇ ವರ್ಷದ ಕೋಟಿ ಚೆನ್ನಯ ಜೋಡುಕೆರೆ ಕಂಬಳ ನಡೆಯಲಿದ್ದು ಈ ಬಾರಿ ಕಂಬಳವನ್ನು ಶಿಸ್ತು, ಸಮಯ ಪ್ರಜ್ಞೆಯೊಂದಿಗೆ ಮತ್ತಷ್ಟು ವ್ಯವಸ್ಥಿತವಾಗಿ ನಡೆಸಲು ತೀರ್ಮಾನಿಸಿದ್ದು ಬೆಳಗ್ಗೆ 8.30ಕ್ಕೆ ಕೋಣಗಳನ್ನು ಕಡ್ಡಾಯವಾಗಿ ಕರೆ ಇಳಿಸಲಿದ್ದೇವೆ ಎಂದು ಶಾಸಕ, ಮೂಡುಬಿದಿರೆ ಕಂಬಳ ಸಮಿತಿ ಅಧ್ಯಕ್ಷ ಉಮಾನಾಥ ಎ.ಕೋಟ್ಯಾನ್ ತಿಳಿಸಿದ್ದಾರೆ. ತುಳುನಾಡಿನ ವಿವಿಧ ಕ್ಷೇತ್ರದ ಸಾಧಕರನ್ನು ಗೌರವಿಸುವ ನಿಟ್ಟಿನಲ್ಲಿ ವೀರರಾಣಿ ಅಬ್ಬಕ್ಕ ರಾಜ್ಯಮಟ್ಟದ ಪ್ರಶಸ್ತಿಯನ್ನು ನೀಡಲು ತೀರ್ಮಾನಿಸಲಾಗಿದ್ದು, ಈ ಬಾರಿ ಅಂತರ್ ರಾಷ್ಟ್ರೀಯ ವಾಸ್ತುತಜ್ಞ ಚಂದ್ರಶೇಖರ ಗುರೂಜಿ ಮುಲ್ಕಿ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ತಿಳಿಸಿದರು.

## ಸೋಲಾರ್ ಅಳವಡಿಕೆ ಹೆಚ್ಚಿಸಲು ಸಂಸದ ಚೌಟ ಸೂಚನೆ



ಮಂಗಳೂರು: ಮನೆಯ ಮೇಲ್ಚಾವಣಿಯಲ್ಲಿ ಸೋಲಾರ್ ಸಿಸ್ಟಮ್ ಅಳವಡಿಸಿದರೆ ಕೇಂದ್ರ ಸರಕಾರದಿಂದ ಗ್ರಾಹಕರಿಗೆ ಸಬ್ಸಿಡಿ ದೊರಕುತ್ತಿದ್ದು ಈ ಬಗ್ಗೆ ಸಾರ್ವಜನಿಕರಲ್ಲಿ ಹೆಚ್ಚು ಅರಿವು ಮೂಡಿಸುವಂತೆ ಲೋಕಸಭಾ ಸದಸ್ಯ ಬ್ರಿಜೇಶ್ ಚೌಟ ಸೂಚಿಸಿದ್ದಾರೆ. ಈ ಯೋಜನೆಯಂತೆ ಸಾರ್ವಜನಿಕರು ತಮ್ಮ ಮನೆಯ ಮೇಲ್ಚಾವಣಿಯಲ್ಲಿ ಸೋಲಾರ್ ಸಿಸ್ಟಮ್ ಅಳವಡಿಸಿದರೆ ಸರಕಾರದಿಂದ ಸಬ್ಸಿಡಿ ದೊರಕಲಿದೆ. 1 ಕಿಲೋ ವ್ಯಾಟ್ ಗೆ 30ಸಾವಿರ ರೂ., 2 ಕಿಲೋ ವ್ಯಾಟ್ ರೂ.60ಸಾವಿರ, 3 ಕಿಲೋ ವ್ಯಾಟ್ ಮೇಲ್ಪಟ್ಟ ಸೋಲಾರ್‌ಗಳಿಗೆ ರೂ.78 ಸಾವಿರ ವರೆಗೆ ಸಬ್ಸಿಡಿ ದೊರಕಲಿದೆ ಎಂದು ಅವರು ತಿಳಿಸಿದರು. ಈ ಸೋಲಾರ್ ಯೋಜನೆಯಿಂದ ಉತ್ಪತ್ತಿಯಾಗುವ ವಿದ್ಯುತ್ನ್ನು ತಮ್ಮ ಮನೆಯ ಬಳಕೆಗೆ ಉಪಯೋಗಿಸಬಹುದು ಹಾಗೂ ಹೆಚ್ಚುವರಿ ವಿದ್ಯುತ್‌ಅನ್ನು ಮೆಸ್ಕಾಂಗೆ ಮಾರಾಟ ಮಾಡಬಹುದಾಗಿದೆ ಎಂದು ಸಂಸದರು ತಿಳಿಸಿದರು.

## ಬೆಂಗ್ರೆ ನಿವಾಸಿಗಳಿಗೆ ಹಕ್ಕು ಪತ್ರ ವಿತರಣೆ



ಮಂಗಳೂರು: ಬೆಂಗ್ರೆ ಪ್ರದೇಶದ 9 ಮಂದಿಗೆ ಸರ್ವೆ ನಂಬ್ರ ನಮೂದಿಸಿ ಹಕ್ಕುಪತ್ರವನ್ನು ವಿಧಾನ ಪರಿಷತ್ ಸದಸ್ಯ ಐವನ್ ಡಿ ಸೋಜ ಅವರು ತಮ್ಮ ಕಚೇರಿಯಲ್ಲಿ ವಿತರಿಸಿದರು. ಬಾಕಿ ಉಳಿದಿರುವ ನಿವಾಸಿಗಳಿಗೆ ಸರ್ವೆ ನಂಬ್ರವನ್ನು ನಮೂದಿಸಿ, ಹಕ್ಕುಪತ್ರ ನೀಡಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡುರಾವ್ ಇವರ ಅಧ್ಯಕ್ಷತೆಯಲ್ಲಿ ನಡೆದ ಕೆಡಿಪಿ ಸಭೆಯಲ್ಲಿ ವಿಧಾನ ಪರಿಷತ್ ಸದಸ್ಯ ಐವನ್ ಡಿ ಸೋಜ ಆಗ್ರಹಿಸಿದ್ದರು. 3 ತಿಂಗಳೊಳಗಾಗಿ ಬೆಂಗ್ರೆಯಲ್ಲಿ ವಾಸವಾಗಿರುವ ಎಲ್ಲಾ ನಿವಾಸಿಗಳಿಗೆ ಹಕ್ಕು ಪತ್ರ ನೀಡಬೇಕೆಂದು ದಿನೇಶ್ ಗುಂಡೂರಾವ್ ಜಿಲ್ಲಾಧಿಕಾರಿ ಮತ್ತು ತಹಶೀಲ್ದಾರರಿಗೆ ನಿರ್ದೇಶನ ನೀಡಿದ್ದರು.

## ವಕ್ಫ್ ಸಂಸ್ಥೆಗಳಿಗೆ ಫ್ರೀಜರ್ ಬಾಕ್ಸ್ ಹಸ್ತಾಂತರ



ಉಡುಪಿ: ರಾಜ್ಯ ಸರಕಾರ ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ಮೂಲಕ ಉಡುಪಿ ಜಿಲ್ಲೆಯ 8 ವಕ್ಫ್ ಸಂಸ್ಥೆಗಳಿಗೆ ಮೃತದೇಹಗಳ ಇಡುವ ಫ್ರೀಜರ್ ಬಾಕ್ಸ್‌ಗಳನ್ನು ಒದಗಿಸಿದ್ದು, ಇದರ ಹಸ್ತಾಂತರ ಕಾರ್ಯಕ್ರಮವು ಮಣಿಪಾಲದಲ್ಲಿರುವ ಉಡುಪಿ ಜಿಲ್ಲಾ ವಕ್ಫ್ ಕಛೇರಿಯಲ್ಲಿ ಜರಗಿತು. ಉಡುಪಿ ಜಾಮಿಯಾ ಮಸೀದಿ, ಕುಂದಾಪುರ ಜಾಮಿಯಾ ಮಸೀದಿ, ಕಾರ್ಕಳ ಸಾಲ್ಮರ್ ಮುಸ್ಲಿಂ ಜಮಾತ್ ಜುಮಾ ಮಸೀದಿ, ಕೋಟ ಜಾಮಿಯಾ ಮಸೀದಿ, ಕಟಪಾಡಿ ಜಾಮಿಯಾ ಮಸೀದಿ, ಮಲ್ಪೆ ಸೈಯದಿನ ಅಬೂಬಕ್ಕರ್ ಸಿದ್ದಿಕ್ ಮಸೀದಿ, ಮರವಂತೆ ನಾವುಂದ ಮುಹಿಯದ್ದೀನ್ ಜುಮ್ಮಾ ಮಸೀದಿ ಹಾಗೂ ಬೈಂದೂರು ಜಾಮಿಯಾ ಮಸೀದಿಗಳಿಗೆ ಉಡುಪಿ ಜಿಲ್ಲಾ ಸಲಹಾ ಸಮಿತಿಯ ಅಧ್ಯಕ್ಷ ಸಿ.ಎಚ್.ಅಬ್ದುಲ್ ಮುತಾಲಿ ವಂಡ್ಸೆ ಹಸ್ತಾಂತರಿಸಿದರು

# ಸುದ್ದಿ ತುಣುಕು

ಮೈಸೂರಿನ ಕೆಆರ್‌ಎಸ್ ರಸ್ತೆಗೆ ಪ್ರಿನ್ಸೆಸ್ ರಸ್ತೆ ಎಂಬ ಹೆಸರಿರುವ ಬಗ್ಗೆ ಸಂಸದ ಯದುವೀರ್ ಒಡೆಯರ್ ಹಾಗೂ ಇತರ ಮುಖಂಡರು ಮಹಾನಗರ ಪಾಲಿಕೆಯ ಆಯುಕ್ತರಿಗೆ ದಾಖಲಾತಿಗಳನ್ನು ನೀಡಿದ್ದಾರೆ.

ಜನಪ್ರಿಯ ಮೃದಂಗ ವಾದಕ ಬಾಲಸುಬ್ರಹ್ಮಣ್ಯಂ(ಬಾಲಿ)ಬೆಂಗಳೂರಿನಲ್ಲಿ ನಿಧನರಾಗಿದ್ದಾರೆ.

ಧಾರವಾಡವನ್ನು ಪ್ರತ್ಯೇಕ ಮಹಾನಗರ ಪಾಲಿಕೆ ಮಾಡಲು ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಹಾವೇರಿ ಜಿಲ್ಲೆಯಲ್ಲಿ ಗಾಡಾ ಓಡಿಸುವ ಸ್ಪರ್ಧೆ ಆಯೋಜಿಸಲಾಗಿತ್ತು. ಸ್ಪರ್ಧೆಗೆ ವಿವಿಧೆಡೆಯಿಂದ ಸುಮಾರು 60ಕ್ಕೂ ಹೆಚ್ಚು ಎತ್ತುಗಳು ಭಾಗವಹಿಸಿದ್ದವು.

ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಇಂದು ಲೋಕಾಯುಕ್ತ ವಿಚಾರಣೆಗೆ ಇಬ್ಬರು ಬಿಜೆಪಿ ಮಾಜಿ ಶಾಸಕರು ಆಗಮಿಸಿ ಪೊಲೀಸರ ಪ್ರಶ್ನೆಗೆ ಉತ್ತರಿಸಿದ್ದಾರೆ.

ಬಸ್ ಪ್ರಯಾಣದ ದರ ಹೆಚ್ಚಳಕ್ಕೆ ಮುಂದಾಗಿರುವ ಸರ್ಕಾರದ ನಿರ್ಧಾರದ ಕುರಿತು ದಾವಣಗೆರೆ ಜನರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರಾಜ್ಯದ ಸ್ಮಾರ್ಟ್ ಸಿಟಿ ಅಭಿಯಾನದಡಿ ನಡೆದಿರುವ ಕಾಮಗಾರಿಗಳ ತನಿಖೆ ನಡೆಸಿ ಮೂರು ತಿಂಗಳ ಕಾಲಮಿತಿಯೊಳಗೆ ಸಮಗ್ರ ವರದಿ ನೀಡುವಂತೆ ಸಚಿವ ಬೈರತಿ ಸುರೇಶ್ ಸೂಚಿಸಿದ್ದಾರೆ.

ಬೆಳಗಾವಿಯಲ್ಲಿ ಸಂಭಾಜಿ ಮೂರ್ತಿ ಉದ್ಘಾಟನೆ ವಿಚಾರವು ವಿವಾದಕ್ಕೆ ಕಾರಣವಾಗಿದ್ದು, ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿದೆ.

ರಾಜ್ಯದಲ್ಲಿ ಸಚಿವ ಸಂಪುಟ ಪುನರ್‌ರಚನೆ ಬಗ್ಗೆ ಗೊತ್ತಿಲ್ಲ. ಸಿಎಂ ಬಳಿಯೇ ನೀವು ಕೇಳಬೇಕು. ಹೈಕಮಾಂಡ್ ಅದನ್ನು ತೀರ್ಮಾನಿಸುತ್ತದೆ ಎಂದು ಸಚಿವ ಸತೀಶ್ ಜಾರಕಿಹೊಳಿ ಪ್ರತಿಕ್ರಿಯಿಸಿದರು.

ರಾಜ್ಯದಲ್ಲಿ ಬಾಣಂತಿಯರ ಸಾವು ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ವಹಿಸಬೇಕು ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ್ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ನಾನು ಯಾರ ಜೊತೆಯೂ ಹೊಂದಾಣಿಕೆ ರಾಜಕಾರಣ ಮಾಡಿಕೊಂಡಿಲ್ಲ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿದ್ದಾರೆ.

ಎಂಎಲ್‌ಸಿ ಹೆಚ್ ವಿಶ್ವನಾಥ್ ಅವರು ರಾಜ್ಯದಲ್ಲಿ ಆರ್ಥಿಕ ಪರಿಸ್ಥಿತಿ ಅಧೋಗತಿಯಲ್ಲಿದೆ ಎಂದು ಆರೋಪಿಸಿದ್ದಾರೆ.

ಪೊಲೀಸ್ ಕಸ್ಟಡಿಯಲ್ಲಿರುವಾಗಲೇ ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯಿ ಸಂದರ್ಶನವನ್ನು ರೆಕಾರ್ಡ್ ಮಾಡಲು ಖಾಸಗಿ ವಾಹಿನಿಗೆ ನೆರವಾದ ಆರೋಪದಡಿ ಡಿಎಸ್‌ಪಿ ದರ್ಜೆಯ ಅಧಿಕಾರಿಯನ್ನು ಪಂಜಾಬ್ ಸರ್ಕಾರ ಹುದ್ದೆಯಿಂದಲೇ ವಜಾ ಮಾಡಿದೆ.

ಗುತ್ತಿಗೆದಾರನೊಬ್ಬನಿಂದ ಲಂಚ ಪಡೆಯುತ್ತಿದ್ದ ಇಬ್ಬರು ಅಧಿಕಾರಿಗಳನ್ನು ಲೋಕಾಯುಕ್ತ ಅಧಿಕಾರಿಗಳು ಬಂಧಿಸಿದ್ದಾರೆ.

ದೆಹಲಿಯಲ್ಲಿ ಪ್ರತಿಕೂಲ ಹವಾಮಾನವಿದ್ದು ಅನೇಕ ವಿಮಾನಗಳು ಹಾಗು ರೈಲು ಸಂಚಾರ ವಿಳಂಬವಾಗಿ, ಪ್ರಯಾಣಿಕರಿಗೆ ಸಮಸ್ಯೆಯಾಗಿದೆ.

ಪೂಜಾ ಸ್ಥಳಗಳ ಕಾಯ್ದೆ-1991ರ ಪರಿಣಾಮಕಾರಿ ಅನುಷ್ಠಾನಕ್ಕೆ ಕೋರಿ ಅಸಾದುದ್ದೀನ್ ಓವೈಸಿ ಸಲ್ಲಿಸಿರುವ ಅರ್ಜಿ ವಿಚಾರಣೆಗೆ ಸುಪ್ರೀಂ ಕೋರ್ಟ್ ಒಪ್ಪಿದೆ.

## ಚಿಕನ್ ಗ್ರೀನ್ ಮಸಾಲ



**ಬೇಕಾಗುವ ಸಾಮಾಗ್ರಿಗಳು :**

ಕೋಳಿ ಮಾಂಸ – 1 ಕೆ.ಜಿ
ಹಸಿ ಮೆಣಸಿನಕಾಯಿ – 15-20
ಈರುಳ್ಳಿ – 2
ಬೆಳ್ಳುಳ್ಳಿ – 10 ಎಸಳು
ಶುಂಠಿ – 1/2 ಇಂಚು
ಕೊತ್ತಂಬರಿ ಸೊಪ್ಪು – 1/2 ಕಪ್
ಪುದಿನಾ ಸೊಪ್ಪು – 10 ಎಲೆ
ಅರಿಶಿನಪುಡಿ – 1 ಚಮಚ
ಕೊತ್ತಂಬರಿ ಪುಡಿ – 2 ಚಮಚ
ಜೀರಿಗೆ ಪುಡಿ– 1 ಚಮಚ
ಗರಂ ಮಸಾಲ – 1 ಚಮಚ
ಎಣ್ಣೆ – 4-5 ಚಮಚ
ಜೀರಿಗೆ – 1 ಚಮಚ
ಉಪ್ಪು – ರುಚಿಗೆ ತಕ್ಕಷ್ಟು

**ಮಾಡುವ ವಿಧಾನ :**

ಮೊದಲಿಗೆ ಈರುಳ್ಳಿ, ಬೆಳ್ಳುಳ್ಳಿ, ಶುಂಠಿ, ಕೊತ್ತಂಬರಿ ಸೊಪ್ಪು, ಪುದಿನಾ ಸೊಪ್ಪು ಮತ್ತು ಹಸಿ ಮೆಣಸಿನಕಾಯಿ, ಉಪ್ಪು ಮತ್ತು ಸ್ವಲ್ಪ ನೀರಿನೊಂದಿಗೆ ರುಬ್ಬಿ ಪೇಸ್ಟ್ ತಯಾರಿಸಿಕೊಂಡು, ಚೆನ್ನಾಗಿ ತೊಳೆದ ಕೋಳಿ ಮಾಂಸದೊಂದಿಗೆ ಚೆನ್ನಾಗಿ ಮಿಶ್ರಣ ಮಾಡಿ ಅರ್ಧಗಂಟೆ ಹಾಗೆ ಇಡಬೇಕು. ನಂತರ ಬಾಣಲೆಯಲ್ಲಿ ಎಣ್ಣೆ ಹಾಕಿ ಕಾಯಿಸಿ, ಅದರಲ್ಲಿ ಜೀರಿಗೆಯನ್ನು ಹಾಕಿದ ನಂತರ ಮಿಶ್ರಣದಲ್ಲಿರುವ ಕೋಳಿ ಮಾಂಸವನ್ನು ಮಧ್ಯಮ ಗಾತ್ರದ ಉರಿಯಲ್ಲಿ 6-7 ನಿಮಿಷಗಳ ಬೇಯಿಸಬೇಕು. ನಂತರ ಇದಕ್ಕೆ ಕೊತ್ತೊಂಬರಿ ಪುಡಿ, ಜೀರಿಗೆ ಪುಡಿ, ಅರಿಶಿನ ಪುಡಿ ಮತ್ತು ಗರಂ ಮಸಾಲ ಪುಡಿಯನ್ನು ಹಾಕಿ ಚೆನ್ನಾಗಿ ಮಿಶ್ರಣ ಮಾಡಿ,ಪಾತ್ರೆಯನ್ನು ಮುಚ್ಚಿ, ಮಂದ ಉರಿಯಲ್ಲಿ 10 ನಿಮಿಷ ಆಗಾಗ ತಿರುವುತ್ತಾ ಬೇಯಿಸಿದರೆ ರುಚಿಕರವಾದ ಗ್ರೀನ್ ಮಸಾಲ ಸವಿಯಲು ಸಿದ್ಧ.

# ಬ್ರಿಟನ್ ರಾಜಾ ಚಾರ್ಲ್ಸ್ 2025ರ ಗೌರವ ಪಟ್ಟಿ



ಲಂಡನ್: ಕಿಂಗ್ ಚಾರ್ಲ್ಸ್ 2025ರ ಹೊಸ ವರ್ಷದ ಗೌರವ ಪಟ್ಟಿಯಲ್ಲಿ ಈ ಬಾರಿ 30 ಭಾರತೀಯ ಮೂಲದ ಸಮುದಾಯ ನಾಯಕರು, ಪ್ರಚಾರಕರು ಮತ್ತು ವೈದ್ಯಕೀಯ ವೃತ್ತಿಪರರು ಸೇರಿದಂತೆ ಹಲವರು ಸೇರಿದ್ದಾರೆ. ಲಂಡನ್‌ನಲ್ಲಿ ಈ ಗೌರವ ನಡೆಯಲಿದ್ದು, ಶ್ರೀಲಂಕಾ ಮತ್ತು ಭಾರತೀಯ ಪರಂಪರೆಯ ಸಂಸತ್‌ನ ಕನ್ಸರ್ವೆಟಿವ್ ಸದಸ್ಯರಾದ ರಾನಿಲ್ ಮಲಕೊಲಮ್ ಮತ್ತು ಇತ್ತೀಚಿಗೆ ಇಂಗ್ಲೆಂಡ್ ಫುಟ್ಬಾಲ್ ತಂಡದ ಮ್ಯಾನೇಜರ್ ಹುದ್ದೆಗೆ ರಾಜೀನಾಮೆ ನೀಡಿದ ಗರೆತ್ ಸೌತ್‌ಗೇಟ್ ಕೂಡ ಇದ್ದಾರೆ.

# ಸಿರಿಯಾದಲ್ಲಿ ಚುನಾವಣೆ ನಡೆಸಲು 4 ವರ್ಷ ಬೇಕಾಗಬಹುದು!



ಡಮಾಸ್ಕಸ್: ಯುದ್ಧಪೀಡಿತ ಸಿರಿಯಾದಲ್ಲಿ ಚುನಾವಣೆ ನಡೆಸಲು ಕನಿಷ್ಠ ನಾಲ್ಕು ವರ್ಷ ಬೇಕಾಗಬಹುದು ಎಂದು ಪ್ರಸ್ತುತ ಸಿರಿಯಾದ ಆಡಳಿತದ ಚುಕ್ಕಾಣಿ ಹಿಡಿದಿರುವ ಮುಖಂಡ ಅಹ್ಮದ್ ಅಲ್-ಶರಾ ಹೇಳಿದ್ದಾರೆ. ದೇಶದಲ್ಲಿ ಅರ್ಹ ಮತದಾರರ ಸಂಖ್ಯೆಯನ್ನು ತಿಳಿಯಲು ಹೊಸ ಜನಗಣತಿಯನ್ನು ನಡೆಸಬೇಕಾಗಿರುವುದರಿಂದ ನಾಲ್ಕು ವರ್ಷಗಳ ನಂತರ ಚುನಾವಣೆಗಳು ನಡೆಯುವ ಸಾಧ್ಯತೆಯಿದೆ ಎಂದು ಅವರು ತಿಳಿಸಿದರು.

# ದಕ್ಷಿಣ ಕೊರಿಯಾ ಭೀಕರ ವಿಮಾನ ದುರಂತ



ದಕ್ಷಿಣ ಕೊರಿಯಾ: ದಕ್ಷಿಣ ಕೊರಿಯಾದ ಮುವಾನ್ ವಿಮಾನ ನಿಲ್ದಾಣದಲ್ಲಿ ಇಂದು ಬೆಳಗ್ಗೆ ಭೀಕರ ವಿಮಾನ ದುರಂತ ಸಂಭವಿಸಿದೆ. ವಿಮಾನದಲ್ಲಿದ್ದ 181 ಜನರ ಪೈಕಿ 179 ಜನ ಸಾವನ್ನಪ್ಪಿದ್ದಾರೆ ಎಂದು ಅಗ್ನಿಶಾಮಕ ಇಲಾಖೆ ಹೇಳಿದೆ. ದುರಂತದಲ್ಲಿ ಜೆಜು ಏರ್ ವಿಮಾನ ಸಂಪೂರ್ಣ ಸುಟ್ಟು ಹೋಗಿದೆ. ವಿಮಾನದಲ್ಲಿದ್ದ ಇಬ್ಬರು ಸಿಬ್ಬಂದಿ ಹೊರತುಪಡಿಸಿ ಎಲ್ಲ 179 ಮಂದಿ ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

# ಕ್ಷಮೆ ಕೋರಿದ ರಷ್ಯಾ ಅಧ್ಯಕ್ಷ ಪುಟಿನ್




ಮಾಸ್ಕೋ: ಕಝಾಕಿಸ್ತಾನದಲ್ಲಿ ಅಜರ್‌ಬೈಜಾನ್ ವಿಮಾನ ಪತನಗೊಂಡು 38 ಮಂದಿ ಬಲಿಯಾದ ಘಟನೆ ಕುರಿತಂತೆ, ಅಜರ್‌ಬೈಜಾನ್ ಅಧ್ಯಕ್ಷ ಇಲ್ಹಾಮ್ ಅಲಿಯೆವ್ ಅವರ ಬಳಿ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಕ್ಷಮೆಯಾಚಿಸಿದ್ದಾರೆ. ಆದರೆ, ಘಟನೆಗೆ ರಷ್ಯಾವೇ ಕಾರಣ ಎಂದು ಒಪ್ಪಿಕೊಂಡಿಲ್ಲ. ವಿಮಾನವು ಡಿಸೆಂಬರ್ 25 ರಂದು ಅಜರ್‌ಬೈಜಾನ್‌ನ ರಾಜಧಾನಿ ಬಾಕುದಿಂದ ರಷ್ಯಾದ ಗ್ರೋಜ್ನಿಗೆ ಹಾರುತ್ತಿದ್ದಾಗ ಅದು ಕಝಾಕಿಸ್ತಾನ್ ವಾಯು ಪ್ರದೇಶದಲ್ಲಿ ಇಳಿಯಲು ಪ್ರಯತ್ನಿಸುವಾಗ ಅಪಘಾತಕ್ಕೀಡಾಯಿತು. ವಿಮಾನ ದಲ್ಲಿ 67 ಮಂದಿ ಇದ್ದರು. ಇದರಲ್ಲಿ 29 ಮಂದಿ ಬದುಕುಳಿದಿದ್ದರು.

# ಅಫ್ಘಾನ್-ಪಾಕ್ ಗಡಿ ಪಡೆಗಳ ನಡುವೆ ಘರ್ಷಣೆ




ಕಾಬೂಲ್: ಗಡಿ ದಾಟುವ ಸ್ಥಳಗಳಲ್ಲಿ ಅಫ್ಘಾನಿಸ್ತಾನ ಮತ್ತು ಪಾಕಿಸ್ತಾನಿ ಗಡಿ ಭದ್ರತಾ ಪಡೆಗಳ ನಡುವೆ ಭಾರೀ ಘರ್ಷಣೆ ಸಂಭವಿಸಿದ್ದು, 19 ಪಾಕಿಸ್ತಾನಿ ಸೈನಿಕರು ಮತ್ತು ಮೂವರು ಅಫ್ಘಾನಿಸ್ತಾನ ನಾಗರಿಕರು ಸೇರಿದಂತೆ ಒಟ್ಟು 22 ಜನ ಮೃತಪಟ್ಟಿದ್ದಾರೆ ಎಂದು ಸ್ಥಳೀಯ ಮಾಧ್ಯಮಗಳು ಶನಿವಾರ ವರದಿ ಮಾಡಿವೆ. ಪಾಕಿಸ್ತಾನದೊಂದಿಗೆ ಗಡಿ ಹಂಚಿಕೊಂಡಿರುವ ಪೂರ್ವ ಅಫ್ಘಾನಿಸ್ತಾನದ ಖೋಸ್ಟ್ ಮತ್ತು ಪಕ್ತಿಯಾ ಪ್ರಾಂತ್ಯಗಳಲ್ಲಿ ಈ ಘರ್ಷಣೆ ನಡೆಯುತ್ತಿದೆ.

# ಸಿರಿಯಾ-ಲೆಬನಾನ್ ಗಡಿಯಲ್ಲಿ ಇಸ್ರೇಲ್ ದಾಳಿ



ಇಸ್ರೇಲ್: ಇಸ್ರೇಲ್ ಏರ್ ಫೋರ್ಸ್ ಫೈಟರ್ ಜೆಟ್‌ಗಳು ಸಿರಿಯಾ – ಲೆಬನಾನ್ ಗಡಿಯಲ್ಲಿನ ಜಂತಾ ಕ್ರಾಸಿಂಗ್‌ನಲ್ಲಿ ಮೂಲ ಸೌಕರ್ಯಗಳ ಮೇಲೆ ದಾಳಿ ನಡೆಸಿವೆ ಎಂದು ಇಸ್ರೇಲ್ ರಕ್ಷಣಾ ಪಡೆಗಳು ವರದಿ ಮಾಡಿದೆ. ಈ ದಾಳಿಗಳು ಸಿರಿಯನ್ ಪ್ರದೇಶದಿಂದ ಲೆಬನಾನ್ ಪ್ರದೇಶಕ್ಕೆ ಶಸ್ತ್ರಾಸ್ತ್ರಗಳ ವರ್ಗಾವಣೆಯನ್ನು ತಡೆಯುವ ಇಸ್ರೇಲ್ ರಕ್ಷಣಾ ಪಡೆಯ ಪ್ರಯತ್ನದ ಮತ್ತೊಂದು ಭಾಗವಾಗಿದೆ ಮತ್ತು ಶಸ್ತ್ರಾಸ್ತ್ರಗಳ ವರ್ಗಾವಣೆ ಮಾಡಲು ಭಯೋತ್ಪಾದಕ ಸಂಘಟನೆ ಹೆಜ್ಬೊಲ್ಲಾಗೆ ಕಷ್ಟವಾಗುತ್ತದೆ ಎಂದು ಇಸ್ರೇಲ್ ರಕ್ಷಣಾ ಪಡೆ ಹೇಳಿದೆ.

# ಬಾಕ್ಸಿಂಗ್ ಡೇ ಟೆಸ್ಟ್ ಪಂದ್ಯದಲ್ಲಿ ಭಾರತಕ್ಕೆ ಸೋಲು




ಆಸ್ಟ್ರೇಲಿಯಾ : ಬಾರ್ಡರ್ ಗವಾಸ್ಕರ್ ಟ್ರೋಫಿ ಭಾಗವಾಗಿ ಮೆಲ್ಬೋರ್ನ್ ಕ್ರಿಕೆಟ್ ಮೈದಾನದಲ್ಲಿ ನಡೆದ ನಾಲ್ಕನೇ ಟೆಸ್ಟ್ ಪಂದ್ಯದಲ್ಲಿ ಭಾರತ ಹೀನಾಯವಾಗಿ ಸೋಲನುಭವಿಸಿದೆ. ಈ ರೋಚಕ ಪಂದ್ಯದ ಎರಡನೇ ಇನ್ನಿಂಗ್ಸ್‌ನಲ್ಲಿ ಸಾಂಘಿಕ ಪ್ರದರ್ಶನ ತೋರಿದ್ದರೂ ಅಂತಿಮವಾಗಿ 184ರನ್ ಗಳಿಂದ ಸೋಲನ್ನು ಕಂಡಿದೆ. ಇದರೊಂದಿಗೆ ಐದು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಆಸ್ಟ್ರೇಲಿಯಾ 2-1 ಅಂತರದಿಂದ ಮುನ್ನಡೆ ಸಾಧಿಸಿದೆ.

# ಕೊನೇರು ಹಂಪಿ ವಿಶ್ವ ಚಾಂಪಿಯನ್




ನ್ಯೂಯಾರ್ಕ್: ಭಾರತದ ಗ್ರ್ಯಾಂಡ್‌ಮಾಸ್ಟರ್ ಕೊನೇರು ಹಂಪಿ ಅವರು ಇಂಡೋನೇಷ್ಯಾದ ಐರಿನ್ ಸುಕಂದರ್ ಅವರನ್ನು ಮಣಿಸಿ ಮಹಿಳಾ ವಿಶ್ವ ರ್‍ಯಾಪಿಡ್ ಚೆಸ್ ಚಾಂಪಿಯನ್ ಕಿರೀಟ ಮುಡಿಗೇರಿಸಿಕೊಂಡಿದ್ದಾರೆ. ಈ ಮೂಲಕ 37 ವರ್ಷದ ಕೊನೇರು ಹಂಪಿ ಅವರು ಚೀನಾದ ಜು ವೆನ್ಜುನ್ ಬಳಿಕ ಮಹಿಳೆಯರ ವಿಭಾಗದಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ಪ್ರಶಸ್ತಿ ಗೆದ್ದ ಎರಡನೇ ಚೆಸ್ ಆಟಗಾರ್ತಿಯಾಗಿದ್ದಾರೆ. ನ್ಯೂಯಾರ್ಕ್‌ನಲ್ಲಿ ನಡೆದ ಪಂದ್ಯಾವಳಿಯ ಫೈನಲ್‌ನಲ್ಲಿ 11 ಅಂಕಗಳಲ್ಲಿ 8.5 ಅಂಕಗಳನ್ನು ಕಲೆ ಹಾಕುವ ಮೂಲಕ ಅಗ್ರಸ್ಥಾನ ಗಳಿಸಿದರು.

# ಖೇಲ್ ರತ್ನ ಕ್ರೀಡಾ ಪ್ರಶಸ್ತಿ



ಬೆಂಗಳೂರು: ಕ್ರೀಡಾ ಸಾಧಕರನ್ನು ಗುರುತಿಸಿ ನೀಡಲಾಗುವ ಅತ್ಯುನ್ನತ ಕ್ರೀಡಾ ಪ್ರಶಸ್ತಿಯಾದ ಧ್ಯಾನ್‌ಚಂದ್ ಖೇಲ್ ರತ್ನ ಪ್ರಶಸ್ತಿಗೆ ನಾಲ್ವರ ಹೆಸರನ್ನು ಪ್ರಕಟಿಸಲಾಗಿದೆ. ಒಲಿಂಪಿಕ್ಸ್ ಡಬಲ್ ಪದಕ ವಿಜೇತೆ ಮನುಭಾಕರ್, ಚೆಸ್ ವಿಶ್ವ ಚಾಂಪಿಯನ್ ಡಿ. ಗುಕೇಶ್, ಪುರುಷರ ಹಾಕಿ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್ ಮತ್ತು ಪ್ಯಾರಾಲಿಂಪಿಕ್ ಚಿನ್ನದ ಪದಕ ವಿಜೇತ ಪ್ರವೀಣ್ ಕುಮಾರ್ ಅವರ ಹೆಸರನ್ನು ಖೇಲ್ ರತ್ನ ಪ್ರಶಸ್ತಿಗೆ ಘೋಷಿಸಲಾಗಿದೆ.

# ಬಸ್ ನಿಲ್ದಾಣಗಳಲ್ಲಿ ವಿಕಲಚೇತನರಿಗೆ ನೆರವಾಗಲು ಆಡಿಯೋ



ಬೆಂಗಳೂರು: ದೃಷ್ಟಿ ವಿಕಲಚೇತನರ ಅನುಕೂಲಕ್ಕಾಗಿ ರಾಜ್ಯದ ಎಲ್ಲ ಪ್ರಮುಖ ಬಸ್ ನಿಲ್ದಾಣಗಳಲ್ಲಿ ಮುಂದಿನ ಎರಡು ವರ್ಷಗಳಲ್ಲಿ ಬಸ್ ಸಂಚಾರದ ವಿವರಗಳ ಪ್ರಕಟಣೆಗಾಗಿ ಆಡಿಯೋ ವ್ಯವಸ್ಥೆ ಕಲ್ಪಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ. ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ಮತ್ತು ನ್ಯಾ.ಮೂ. ಕೆ.ವಿ.ಅರವಿಂದ್ ವಿಭಾಗೀಯಪೀಠ ಈ ಆದೇಶ ನೀಡಿದೆ.

# ಕಾರ್ಯಕ್ಷಮತೆ ಹೆಚ್ಚಿಸಿಕೊಳ್ಳೋಣ: ಸಿಎಂ



ಬೆಂಗಳೂರು: ರಾಜ್ಯದ ಜನರ ಆರ್ಥಿಕ ಶಕ್ತಿ ಹೆಚ್ಚಿಸಲು ಇನ್ನಷ್ಟು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಿ, ಪ್ರಾದೇಶಿಕ ಅಸಮತೋಲನ, ಅಸಮಾನತೆ ತೊಡೆಯಲು ನಿಮ್ಮ ಸಹಕಾರ ಹೆಚ್ಚು ಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಐಎಎಸ್, ಐಪಿಎಸ್ ಅಧಿಕಾರಿಗಳಿಗೆ ಕರೆ ನೀಡಿದ್ದಾರೆ. ಪರಿಸ್ಥಿತಿಗಳು ಸದಾ ನಮ್ಮ ಪರವಾಗಿ ಇರುವುದಿಲ್ಲ. ಆದರೆ, ಆತ್ಮವಿಶ್ವಾಸ ಕಳೆದುಕೊಳ್ಳದೇ ಧೈರ್ಯದಿಂದ ಸಮಸ್ಯೆಗಳು ಹಾಗೂ ಸಂದರ್ಭಗಳನ್ನು ನಿರ್ವಹಿಸಿ ಪರಿಹಾರ ಕಂಡುಕೊಳ್ಳಲು ಸಾಧ್ಯವಿದೆ ಎಂದರು.

# ರಸ್ತೆ ಸಾರಿಗೆ ನಿಗಮಗಳಿಂದ ಸಾಲದ ಮೊರೆ



ಬೆಂಗಳೂರು: ಶಕ್ತಿ ಯೋಜನೆಯ ಹೊರೆಗೆ ಸಿಲುಕಿ ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ರಾಜ್ಯದ ನಾಲ್ಕೂ ರಸ್ತೆ ಸಾರಿಗೆ ಸಂಸ್ಥೆಗಳು ಹಣಕಾಸು ನಿರ್ವಹಣೆಗಾಗಿ ಸಾಲದ ಮೊರೆ ಹೋಗಲು ರಾಜ್ಯ ಸರ್ಕಾರ ಒಪ್ಪಿಗೆ ನೀಡಿದೆ. ರಾಜ್ಯದ 4 ರಸ್ತೆ ಸಾರಿಗೆ ನಿಗಮಗಳಿಗೆ ಹಣಕಾಸಿನ ಸಂಸ್ಥೆಗಳಿಂದ ಸಾಲ ತೆಗೆದುಕೊಳ್ಳಲು ಸರ್ಕಾರದ ಖಾತ್ರಿ ನೀಡಲು ತೀರ್ಮಾನಿಸಿದೆ. ರಸ್ತೆ ಸಾರಿಗೆ ನಿಗಮಗಳು ಒಟ್ಟು 2,000 ಕೋಟಿ ಸಾಲ ಪಡೆದುಕೊಳ್ಳಲು ಸರ್ಕಾರದ ಒಪ್ಪಿಗೆ ನೀಡಿದೆ.

# ಅಧಿಕಾರಿಗಳಿಗೆ ವೇತನ ಶ್ರೇಣಿ ಪದೋನ್ನತಿ




ಬೆಂಗಳೂರು: ಹಲವು ಐಎಎಸ್ ಹಾಗೂ ಐಪಿಎಸ್, ಐಎಫ್‌ಎಸ್ ಅಧಿಕಾರಿಗಳಿಗೆ ವೇತನ ಶ್ರೇಣಿಯೊಂದಿಗೆ ಪದೋನ್ನತಿ, ಮುಂಬಡ್ತಿ ನೀಡುವ ಮೂಲಕ ರಾಜ್ಯಸರ್ಕಾರ ನ್ಯೂ ಇಯರ್ ಗಿಫ್ಟ್ ನೀಡಿದೆ. 67 ಐಎಎಸ್ ಅಧಿಕಾರಿ ಗಳಿಗೆ ವೇತನ ಶ್ರೇಣಿಯೊಂದಿಗೆ ಪದೋನ್ನತಿ ನೀಡಿ ಆದೇಶ ಹೊರಡಿಸಲಾಗಿದೆ. 62 ಐಪಿಎಸ್ ಅಧಿಕಾರಿಗಳಿಗೆ ವೇತನ ಶ್ರೇಣಿಯೊಂದಿಗೆ ಪದೋನ್ನತಿ ನೀಡಲಾಗಿದ್ದರೆ, ಇಪ್ಪತ್ತೊಂದು ಐಎಫ್‌ಎಸ್ ಅಧಿಕಾರಿಗಳಿಗೆ ವೇತನ ಶ್ರೇಣಿಯೊಂದಿಗೆ ಪದೋನ್ನತಿ ನೀಡಲಾಗಿದೆ.

# ಹೈಕಮಾಂಡ್‌ಗೂ ಕ್ಯಾರೇ ಎನ್ನದ ಯತ್ನಾಳ್ ಟೀಂ!



ಬೆಂಗಳೂರು : ರಾಜ್ಯದಲ್ಲಿ ಬಿಜೆಪಿ ಬಂಡಾಯ ಬಣ ರಾಜಕೀಯ ಮುಂದುವರೆದಿದ್ದು, ಹೈಕಮಾಂಡ್ ಎಚ್ಚರಿಕೆ ನೀಡಿದರೂ ಕ್ಯಾರೇ ಎನ್ನದ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ತಂಡ ವಕ್ಫ್ ವಿರುದ್ಧ ಎರಡನೇ ಹಂತದ ಹೋರಾಟಕ್ಕೆ ಸಜ್ಜಾಗಿದೆ. ಬಳ್ಳಾರಿ ಜಿಲ್ಲೆಯ ಕಂಪ್ಲಿಯಲ್ಲಿ ಜನವರಿ 4 ರಂದು ವಕ್ಫ್ ವಿರುದ್ಧ ಎರಡನೇ ಹಂತದ ಹೋರಾಟ ನಡೆಸಲು ಯತ್ನಾಳ್ ಅಂಡ್ ಟೀಂ ನಿರ್ಧರಿಸಿದೆ. ಮೊದಲ ಹಂತದ ವಕ್ಫ್ ವಿರುದ್ಧದ ಹೋರಾಟ ಬೆಳಗಾವಿಯಲ್ಲಿ ಅಂತ್ಯಗೊಂಡಿತ್ತು.

# ಮೈಸೂರಿನ ಇನ್ಫೋಸಿಸ್ ಕ್ಯಾಂಪಸ್‌ನಲ್ಲಿ ಚಿರತೆ ಪ್ರತ್ಯಕ್ಷ



ಮೈಸೂರು: ನಗರದ ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿರುವ ಇನ್ಫೋಸಿಸ್ ಕ್ಯಾಂಪಸ್ ಬಳಿ ಚಿರತೆ ಪ್ರತ್ಯಕ್ಷವಾಗಿದ್ದು, ಕ್ಯಾಂಪಸ್‌ನ ಸಿಸಿಟಿವಿಯಲ್ಲಿ ಅದರ ಚಲನವಲನ ಸೆರೆಯಾಗಿದೆ. ಇದರಿಂದ ಆಡಳಿತ ಮಂಡಳಿಯು ತನ್ನ ಉದ್ಯೋಗಿಗಳಿಗೆ ಕ್ಯಾಂಪಸ್ ಪ್ರವೇಶ ಮಾಡದಂತೆ ಹಾಗೂ ವರ್ಕ್ ಫ್ರಮ್ ಹೋಂ ಮಾಡುವಂತೆ ಸೂಚನೆ ನೀಡಿದೆ. ಅರಣ್ಯ ಇಲಾಖೆ ಅಧಿಕಾರಿಗಳು ಚಿರತೆಯ ಚಲನವಲನ ಆಧರಿಸಿ ಸೆರೆಹಿಡಿಯಲು ಕಾರ್ಯತಂತ್ರರೂಪಿಸಿದೆ.

# ಕಡತದಲ್ಲಿ ಪ್ರಿನ್ಸ್ ರಸ್ತೆ ಬಗ್ಗೆ ಎಲ್ಲೂ ಉಲ್ಲೇಖವಿಲ್ಲ



ಮೈಸೂರು: ನಗರದ ವೆಂಕಟೇಶ್ವರ ದೇವಾಲಯದ ಮುಂದಿರುವ ಕೆಆರ್‌ಎಸ್ ರಸ್ತೆಗೆ ಈ ಹಿಂದಿನ ಕಡತದಲ್ಲಿ ಪ್ರಿನ್ಸ್ ರಸ್ತೆ ಎಂದು ಹೆಸರು ಇಲ್ಲ. ಆ ರಸ್ತೆಗೆ ಯಾವ ಹೆಸರೂ ಕಡತದಲ್ಲಿಲ್ಲ ಎಂದು ಮಹಾನಗರ ಪಾಲಿಕೆಯ ಆಯುಕ್ತ ಆಶಾದ್ ಉರ್ ರೆಹಮಾನ್ ಷರೀಫ್ ಸ್ಪಷ್ಟಪಡಿಸಿದರು. ಶ್ರೀ ವೆಂಕಟೇಶ್ವರ ದೇವಾಲಯದಿಂದ ಕೆಆರ್‌ಎಸ್ ಕಡೆ ಹೋಗುವ ಈ ರಸ್ತೆಗೆ 'ಸಿದ್ದರಾಮಯ್ಯ ಆರೋಗ್ಯ ಮಾರ್ಗ' ಎಂಬ ಹೆಸರಿಡುವ ಬಗ್ಗೆ ಸಾರ್ವಜನಿಕರ ವಲಯದಲ್ಲಿ ಕೇಳಿ ಬರುತ್ತಿರುವ ಆಕ್ಷೇಪಣೆಗಳಿಗೆ ಪಾಲಿಕೆ ಸ್ಪಷ್ಟಪಡಿಸಿತು.

# ಎಲ್ಲ ಸರ್ಕಾರಗಳು ರೈತ ವಿರೋಧಿ-ಪ್ರಕಾಶ್‌ರಾಜ್



ಬೆಂಗಳೂರು : "ಎಲ್ಲ ಸರ್ಕಾರಗಳು ರೈತ ವಿರೋಧಿ, ಜನ ವಿರೋಧಿಯಾಗಿವೆ" ಎಂದು ಬಹುಭಾಷಾ ನಟ ಪ್ರಕಾಶ್ ರಾಜ್ ಆಕ್ರೋಶ ವ್ಯಕ್ತಪಡಿಸಿದರು. ರೈತನಿಗೆ ಭೂಮಿ ಆಸ್ತಿಯಲ್ಲ, ಅದು ಅವನ ಬದುಕು, ಎಲ್ಲ ರಾಜಕಾರಣಿಗಳಿಗೂ ರೈತರು ಚುನಾವಣೆಯಲ್ಲಿ ವೋಟು ಹಾಕುವ ಬಟನ್‌ಗಳಷ್ಟೇ ಆಗಿದ್ದಾರೆ ಹೊರತು ಬೇರೆ ಏನೂ ಅಲ್ಲ. ಇದನ್ನು ಸಹಿಸಿಕೊಂಡಿರುವುದಕ್ಕೆ ಆಗುವುದಿಲ್ಲ, ಹೋರಾಟ ನಡೆಯಬೇಕು" ಎಂದರು.

# ಬೋರ್‌ವೆಲ್‌ನಿಂದ ಚೇತನಾಳನ್ನು ಮೇಲಕ್ಕೆತ್ತಿದ ರಕ್ಷಣಾ ಪಡೆ



ರಾಜಸ್ಥಾನ: ಆಟವಾಡುತ್ತಿದ್ದಾಗ ಬೋರ್‌ವೆಲ್‌ಗೆ ಬಿದ್ದಿದ್ದ ಮೂರು ವರ್ಷದ ಬಾಲಕಿ ಚೇತನಾಳ ರಕ್ಷಣಾ ಕಾರ್ಯಾಚರಣೆ ಪೂರ್ಣಗೊಂಡಿದೆ. 10ನೇ ದಿನ ಚೇತನಾಳನ್ನು ಬೋರ್‌ವೆಲ್‌ನಿಂದ ಹೊರ ತೆಗೆಯಲಾಗಿದೆ. ಎನ್‌ಡಿಆರ್‌ಎಫ್ ಸಿಬ್ಬಂದಿ ಚೇತನಾಳನ್ನು ಜಿಲ್ಲಾ ಬಿಡಿಎಂ ಆಸ್ಪತ್ರೆಗೆ ಕರೆದೊಯ್ದಿದ್ದಾರೆ. 10ದಿನಗಳಿಂದ ನಡೆಯುತ್ತಿರುವ ರಕ್ಷಣಾ ಕಾರ್ಯಾಚರಣೆ ನಡುವೆ ರಕ್ಷಣಾ ತಂಡ ಬಾಲಕಿಯನ್ನು ಮೇಲೆತ್ತುವಲ್ಲಿ ಯಶಸ್ವಿಯಾಗಿದೆ.

# ದೇಶದ ಶ್ರೀಮಂತ ಹಾಗೂ ಬಡ ಸಿಎಂಗಳ ಪಟ್ಟಿ ಬಿಡುಗಡೆ



ನವದೆಹಲಿ: ದೇಶದ ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳ ಆಸ್ತಿ ವಿವರ ಮತ್ತು ಯಾರು ಶ್ರೀಮಂತರು ಎಂಬ ಮಾಹಿತಿ ಹೊರಬಿದ್ದಿದೆ. ದಕ್ಷಿಣ ಭಾರತದ ರಾಜ್ಯವೊಂದರ ಸಿಎಂ ದೇಶದಲ್ಲೇ ಅತಿ ಸಿರಿವಂತ ಮುಖ್ಯಮಂತ್ರಿಯಾಗಿದ್ದಾರೆ. ಈ ಪಟ್ಟಿಯಲ್ಲಿ ಕರ್ನಾಟಕದ ಸಿಎಂ ಸಿದ್ದರಾಮಯ್ಯ ಅವರು ಮೂರನೇ ಸ್ಥಾನ ಪಡೆದುಕೊಂಡಿದ್ದಾರೆ. ಆಂಧ್ರಪ್ರದೇಶದ ಸಿಎಂ ಚಂದ್ರಬಾಬು ನಾಯ್ಡು ದೇಶದಲ್ಲಿಯೇ ಅತಿ ಸಿರಿವಂತ ಸಿಎಂ ಆಗಿದ್ದಾರೆ. ಕರ್ನಾಟಕದ ಸಿಎಂ ಸಿದ್ದರಾಮಯ್ಯ 51 ಕೋಟಿ ಆಸ್ತಿಯೊಂದಿಗೆ 3ನೇ ಸ್ಥಾನದಲ್ಲಿದ್ದಾರೆ.

# ನಕಲಿ ಔಷಧಿ : ಕೋಲ್ಕತಾದಲ್ಲಿ ಆರೋಪಿ ಸೆರೆ



ನವದೆಹಲಿ: ಕೋಲ್ಕತಾದಲ್ಲಿ ಕಳೆದ 24 ಗಂಟೆಗಳಲ್ಲಿ ದೊಡ್ಡ ಪ್ರಮಾಣದ ಕ್ಯಾನ್ಸರ್ ಹಾಗೂ ಮಧುಮೇಹ ನಿವಾರಕ ಔಷಧಿಗಳು ಮತ್ತು ನಕಲಿ ಎಂದು ಶಂಕಿಸಲಾದ ಇತರ ಔಷಧಿಗಳನ್ನು ವಶಪಡಿಸಿಕೊಳ್ಳಲಾಗಿದೆ. ಪೂರ್ವ ವಲಯದ ಸೆಂಟ್ರಲ್ ಡ್ರಗ್ಸ್ ಸ್ಟ್ಯಾಂಡರ್ಡ್ ಕಂಟ್ರೋಲ್ ಆರ್ಗನೈಸೇಶನ್ (ಸಿಡಿಎಸ್‌ಸಿಒ) ಮತ್ತು ಪಶ್ಚಿಮ ಬಂಗಾಳದ ಡ್ರಗ್ಸ್ ಕಂಟ್ರೋಲ್ ಡೈರೆಕ್ಟರೇಟ್‌ನ ಜಂಟಿ ತಂಡ ಈ ಕಾರ್ಯಾಚರಣೆ ನಡೆಸಿದೆ.

# ಉಗ್ರರ ಮತಗಳಿಂದ ರಾಹುಲ್, ಪ್ರಿಯಾಂಕಾ ಗೆದ್ದರು: ನಿತೇಶ್ ರಾಣೆ



ಮಹಾರಾಷ್ಟ್ರ: "ಕೇರಳ 'ಮಿನಿ ಪಾಕಿಸ್ತಾನ' ಇದ್ದಂತೆ. ಹೀಗಾಗಿ, ಕಾಂಗ್ರೆಸ್‌ನ ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ವಾದ್ರಾ ಗೆಲುವು ಸಾಧಿಸಿದರು. ಅವರಿಗೆ ಭಯೋತ್ಪಾದಕ ಸಂಘಟನೆಗಳು ಬೆಂಬಲ ನೀಡಿದ್ದವು" ಎಂದು ಮಹಾರಾಷ್ಟ್ರದ ಸಚಿವ ನಿತೇಶ್ ರಾಣೆ ಆರೋಪಿಸಿದ್ದಾರೆ. ಇದನ್ನು ಕಾಂಗ್ರೆಸ್ ಖಂಡಿಸಿದ್ದು, ದೇಶದ ಭಾಗವಾಗಿರುವ ರಾಜ್ಯವನ್ನು ಮಿನಿ ಪಾಕಿಸ್ಥಾನಕ್ಕೆ ಹೋಲಿಸಿದ್ದು ನಾಯಕರ ಉದ್ಧಟತನ ಎಂದು ಕಿಡಿಕಾರಿದೆ.

# ಮಹಾ ಕುಂಭಮೇಳಕ್ಕೆ ಏಳು ಸುತ್ತಿನ ಭದ್ರತೆ



ಪ್ರಯಾಗ್ ರಾಜ್: ಉತ್ತರ ಪ್ರದೇಶದಲ್ಲಿ 12 ವರ್ಷಗಳಿಗೆ ಒಮ್ಮೆ ನಡೆಯುವ ಮಹಾ ಕುಂಭ ಮೇಳಕ್ಕೆ ಭರದಿಂದ ಸಿದ್ಧತೆ ಸಾಗಿದ್ದು, ಭದ್ರತೆಗೆ ಹೆಚ್ಚಿನ ಒತ್ತು ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ಮಹಾ ಕುಂಭಮೇಳಕ್ಕಾಗಿ ಪ್ರಯಾಗ್‌ರಾಜ್‌ಗೆ ಭೇಟಿ ನೀಡುವ 40 ಕೋಟಿಗೂ ಹೆಚ್ಚು ಜನರಿಗೆ 7 ಸುತ್ತಿನ ಭದ್ರತೆಯ ವ್ಯವಸ್ಥೆಯನ್ನು ಕಲ್ಪಿಸುವ ಮೂಲಕ ಜನರ ಸುರಕ್ಷತೆಗೆ ಹೆಚ್ಚಿನ ಒತ್ತು ನೀಡಲಾಗಿದೆ. ಪ್ರಮುಖ ಮಾರ್ಗದಲ್ಲಿ ತಾತ್ಕಾಲಿಕ ಪೊಲೀಸ್ ಠಾಣೆ ಮತ್ತು ಚೆಕ್‌ಪೋಸ್ಟ್ ಗಳನ್ನು ಸ್ಥಾಪಿಸಲು ಸ್ಥಳೀಯ ಅಧಿಕಾರಿಗಳು ನಿರ್ಧರಿಸಿದ್ದಾರೆ.

# 'ಸಂವಿಧಾನ ಓದು' ಅಭಿಯಾನಕ್ಕೆ ಪಿಎಂ ಮೋದಿ ಚಾಲನೆ




ನವದೆಹಲಿ: ಭಾರತವು ಸಂವಿಧಾನವನ್ನು ಅಂಗೀಕರಿಸಿದ 75ನೇ ವರ್ಷಾಚರಣೆಯ ಭಾಗವಾಗಿ ದೇಶಾದ್ಯಂತ ಸಂವಿಧಾನ ಓದು ಅಭಿಯಾನಕ್ಕೆ ಪ್ರಧಾನಿ ಮೋದಿ ಚಾಲನೆ ನೀಡಿದ್ದಾರೆ. ತಮ್ಮ ಮಾಸಿಕ ರೇಡಿಯೋ ಕಾರ್ಯಕ್ರಮ 'ಮನ್ ಕಿ ಬಾತ್' ನಲ್ಲಿ ಪ್ರಧಾನಿ ಈ ಘೋಷಣೆ ಮಾಡಿದ್ದಾರೆ. ಸಂವಿಧಾನ ನಮ್ಮ ದಾರಿದೀಪ.




## ಪ್ರೇಮಿಗಳ ದಿನಕ್ಕೆ ಭುವನಂ ಗಗನಂ ದರ್ಶನ..



ಎಸ್‌ವಿಸಿ ಫಿಲಂಸ್ ಬ್ಯಾನರ್‌ನಡಿ ಎಂ. ಮುನೇಗೌಡ ನಿರ್ಮಿಸಿರುವ ಭುವನಂ ಗಗನಂ ಸಿನಿಮಾ ಬಿಡುಗಡೆಗೆ ಸಜ್ಜಾಗಿದೆ. ಫೆಬ್ರವರಿ 14ರಂದು ಪ್ರೇಮಿಗಳ ದಿನದ ಸ್ಪೆಷಲ್ ಆಗಿ ಚೆಂದದ ಪ್ರೇಮಕಥಾಹಂದರ ಹೊಂದಿರುವ ಚಿತ್ರ ತೆರೆಗೆ ಬರ್ತಿದೆ. ಲವರ್ ಬಾಯ್ ಆಗಿ ಗಮನ ಸೆಳೆದಿರುವ ಪೃಥ್ವಿ ಅಂಬರ್ ಹಾಗೂ ರಗಡ್ ಪಾತ್ರಗಳ ಮೂಲಕ ಖ್ಯಾತಿ ಪಡೆದಿರುವ ಪ್ರಮೋದ್ ನಾಯಕರಾಗಿ ಭುವನಂ ಗಗನಂ ನಲ್ಲಿ ನಟಿಸಿದ್ದಾರೆ. ಗಿರೀಶ್ ಮೂಲಿಮನಿ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಭುವನಂ ಗಗನಂ ಪ್ರೇಮ, ಪ್ರಣಯ ಮತ್ತು ಕೌಟುಂಬಿಕ ಭಾವನೆಗಳನ್ನು ಹೊಂದಿದ್ದು, ನಗರ ಮತ್ತು ಗ್ರಾಮೀಣ ಪ್ರದೇಶಗಳೆರಡರಲ್ಲೂ ನಡೆಯುತ್ತದೆ. ಲವ್ ಮಾಕ್‌ಟೇಲ್ ಚಿತ್ರದಲ್ಲಿನ ಪಾತ್ರಕ್ಕೆ ಹೆಸರುವಾಸಿಯಾದ ರಾಚೇಲ್ ಡೇವಿಡ್ ಪ್ರಮೋದ್ ಅವರಿಗೆ ಜೋಡಿಯಾಗಿದ್ದಾರೆ.

## “ಛೂ ಮಂತರ್” ಜನವರಿ 10ರಂದು ಬಿಡುಗಡೆ..



ನವನೀತ್ ನಿರ್ದೇಶಿಸಿರುವ ಹಾಗೂ ಹೆಸರಾಂತ ನಟ ಶರಣ್ ನಾಯಕರಾಗಿ ನಟಿಸಿರುವ “ಛೂ ಮಂತರ್” ಚಿತ್ರದ ಟ್ರೇಲರ್ ಬಿಡುಗಡೆಯಾಗಿ ಪ್ರೇಕ್ಷಕ ವರ್ಗದಲ್ಲಿ ಕುತೂಹಲ ಮೂಡಿಸಿದೆ. ಚಿತ್ರ ನೋಡುವ ಕಾತುರವನ್ನು ಹೆಚ್ಚಿಸಿದೆ. ಜನವರಿ 10 ರಂದು ಈ ಚಿತ್ರ ಬಿಡುಗಡೆಯಾಗತ್ತಿದೆ. ಸಾಮಾನ್ಯವಾಗಿ ಸಂಕ್ರಾಂತಿ ಸಮಯದಲ್ಲಿ ಬೇರೆ ಭಾಷೆಗಳ ದೊಡ್ಡ ಚಿತ್ರಗಳು ಬಿಡುಗಡೆಯಾಗುವುದರಿಂದ ಕನ್ನಡದ ಚಿತ್ರಗಳನ್ನು ಆ ಸಮಯದಲ್ಲಿ ಹೆಚ್ಚಾಗಿ ಬಿಡುಗಡೆ ಮಾಡುವುದಿಲ್ಲ. ನಮ್ಮ ಚಿತ್ರದ ಕಂಟೆಂಟ್ ಚೆನ್ನಾಗಿದೆ. ಜನರಿಗೆ ಬೇಕಾದ ಎಲ್ಲಾ ಅಂಶಗಳು ಚಿತ್ರದಲ್ಲಿರುವುದರಿಂದ ಪ್ರೇಕ್ಷಕರಿಗೆ ಮೆಚ್ಚುಗೆಯಾಗುವ ಭರವಸೆ ಇದೆ. ಹಾಗಾಗಿ ಸಂಕ್ರಾಂತಿ ಸಮಯದಲ್ಲೇ ಚಿತ್ರವನ್ನು ಬಿಡುಗಡೆ ಮಾಡುತ್ತಿರುವುದಾಗಿ ನಿರ್ಮಾಪಕ ತರಣ್ ಶಿವಪ್ಪ ತಿಳಿಸಿದ್ದಾರೆ.

## ಬಲರಾಮನ ದಿನಗಳಲ್ಲಿ ಪ್ರಿಯಾ..



ಪದ್ಮಾವತಿ ಫಿಲಂಸ್ ಲಾಂಛನದಲ್ಲಿ ಪದ್ಮಾವತಿ ಜಯರಾಂ ಹಾಗೂ ಶ್ರೇಯಸ್ ಅವರು ಅಪಾರವೆಚ್ಚದಲ್ಲಿ ಅದ್ದೂರಿಯಾಗಿ ನಿರ್ಮಿಸುತ್ತಿರುವ, “ಆ ದಿನಗಳು” ಖ್ಯಾತಿಯ ಕೆ.ಎಂ. ಚೈತನ್ಯ ನಿರ್ದೇಶನದಲ್ಲಿ ಟೈಗರ್ ವಿನೋದ್ ಪ್ರಭಾಕರ್ ನಾಯಕರಾಗಿ ನಟಿಸುತ್ತಿರುವ ಚಿತ್ರ “ಬಲರಾಮನ ದಿನಗಳು”. ಈಗ “ಬಲರಾಮನ ದಿನಗಳು” ಚಿತ್ರಕ್ಕೆ ಪ್ರಿಯಾ ಆನಂದ್ ನಾಯಕಿಯಾಗಿ ಆಯ್ಕೆಯಾಗಿದ್ದಾರೆ. “ರಾಜಕುಮಾರ”, “ಜೇಮ್ಸ್”, “ಆರೆಂಜ್”, “ಕರಟಕ ದಮನಕ” ದಂತಹ ಯಶಸ್ವಿ ಚಿತ್ರಗಳಲ್ಲಿ ನಾಯಕಿಯಾಗಿ ನಟಿಸಿ ಪ್ರಿಯಾ ಆನಂದ್ ಜನಪ್ರಿಯರಾಗಿದ್ದಾರೆ. ಹೊಸವರ್ಷದ ಆರಂಭದ ದಿನ ಪೋಸ್ಟರ್ ಬಿಡುಗಡೆ ಮಾಡುವ ಮೂಲಕ ನಾಯಕಿ ಪ್ರಿಯಾ ಆನಂದ್ ಅವರಿಗೆ ಚಿತ್ರತಂಡ ಸ್ವಾಗತ ಹೇಳಿದೆ. ಅಟ್ಟಕತ್ತಿ, ಕಾಲ, ಕಬಾಲಿ, ಭೈರವ, ದಸರಾ, ಕಲ್ಕಿ ಸೇರಿದಂತೆ ಅನೇಕ ಚಿತ್ರಗಳಿಗೆ ಸಂಗೀತ ನೀಡಿರುವ ಜನಪ್ರಿಯ ಸಂಗೀತ ನಿರ್ದೇಶಕ ಸಂತೋಷ್ ನಾರಾಯಣನ್ ಈ ಚಿತ್ರಕ್ಕೆ ಸಂಗೀತ ನೀಡುತ್ತಿದ್ದಾರೆ.

## ಜ.24ಕ್ಕೆ ‘ರುದ್ರ ಗರುಡ ಪುರಾಣ’

‘ಆಪರೇಶನ್ ಅಲಮೇಲ್ಲಮ್ಮ’, ‘ಕವಲು ದಾರಿ’ ಮೂಲಕ ಕನ್ನಡಿಗರ ಮನ ಸೆಳೆದಿರುವ ನಟ ರಿಷಿ, ಈಗ ಕನ್ನಡ ಹಾಗೂ ತೆಲುಗು ಎರಡು ಬಾಷೆಗಳಲ್ಲೂ ಬೇಡಿಕೆ ನಟ. ಪ್ರಸ್ತುತ ರಿಷಿ ನಾಯಕನಾಗಿ ನಟಿಸಿರುವ “ರುದ್ರ ಗರುಡ ಪುರಾಣ” ಚಿತ್ರದ “ಹುಕ್ಕಾ ಹೇಳಿ ಸುಕ್ಕಾ ಹೊಡಿ” ಎಂಬ ಹಾಡು ಬಿಡುಗಡೆಯಾಗಿದೆ. ಹಾಡಿನ ಮುಖಾಂತರ ಪ್ರಸ್ತುತ ರಾಜಕೀಯ ವ್ಯವಸ್ಥೆಯನ್ನು ವಿಡಂಬನೆ ಮಾಡಿರುವುದು ತುಂಬಾ ಚೆನ್ನಾಗಿ ಮೂಡಿ ಬಂದಿದೆ. ಅದರಲ್ಲೂ ಹಾಡಿನಲ್ಲಿ ಬರುವ. “ಫ್ರೀ ರೈಸ್ ಕೊಟ್ಟಿಲ್ವಾ ಫ್ರೀ ಬಸ್ಸು ಬಿಟ್ಟಿಲ್ವಾ, ಕೊಟ್ಟು ತಗೋಳೋ ಆಟ ಗೊತ್ತಿಲ್ವಾ” ಎಂಬ ಸಾಲುಗಳು ಓಟಿಗಾಗಿ ರಾಜಕೀಯ ನಾಯಕರ ಮೋಸದಾಟವನ್ನು ಪದಗಳ ಮೂಲಕ ಚೆನ್ನಾಗಿ ಮಂಜು ಮಾಂಡವ್ಯ ಬರೆದಿದ್ದಾರೆ. ಚಿತ್ರ ಜನವರಿ 24ರಂದು ರಾಜ್ಯಾದ್ಯಂತ ಅದ್ದೂರಿಯಾಗಿ ಬಿಡುಗಡೆಯಗುತ್ತಿದೆ.



## ಸಿಂಹದ ಹಾದಿಗೆ ಗಣ್ಯರ ಹಾರೈಕೆ..

ಜಿ. ಕೆ. ಸಿನಿಫೈಲ್ಸ್ ಪ್ರೊಡಕ್ಷನ್ಸ್ ಬ್ಯಾನರ್‌ನಲ್ಲಿ ಬಾಲ್ಯದಿಂದಲೂ ವಿಷ್ಣು ಅಭಿಮಾನಿಯಾಗಿರುವ ಜಿ. ಕೆ. ಶಶಿರಾಜ್ ದೊರ್ರೈ ಸಿಂಹದ ಹಾದಿ ಎಂಬ ಟೆಲಿಚಿತ್ರವನ್ನು ನಿರ್ಮಿಸಿ ತೆರೆಗೆ ತರುತ್ತಿದ್ದಾರೆ. ವಿಷ್ಣುವರ್ಧನ್ ಪುಣ್ಯಸ್ಮರಣೆಗೂ ಮುನ್ನ ನಡೆದ ಸಮಾರಂಭದಲ್ಲಿ, ಹಿರಿಯ ನಿರ್ದೇಶಕ ಎಸ್. ವಿ. ರಾಜೇಂದ್ರ ಸಿಂಗ್ ಬಾಬು, ಜೋ ಸೈಮನ್, ‘ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಕೃಷ್ಣೇಗೌಡ, ‘ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಮಾಜಿ ಅಧ್ಯಕ್ಷ ಭಾ. ಮ. ಹರೀಶ್, ‘ಕನ್ನಡ ಚಲನಚಿತ್ರ ನಿರ್ಮಾಪಕರ ಸಂಘದ ಅಧ್ಯಕ್ಷ ಉಮೇಶ್ ಬಣಕಾರ್, ಹಿರಿಯ ನಟಿ ಲಕ್ಷ್ಮೀದೇವಮ್ಮ, ವಿಧಾನ ಪರಿಷತ್ ಸದಸ್ಯ ವೀರಯ್ಯ ಸೇರಿದಂತೆ ಚಿತ್ರರಂಗ ಮತ್ತು ರಾಜಕೀಯ ರಂಗದ ಅನೇಕ ಗಣ್ಯರು ಹಾಜರಿದ್ದು, ‘ಸಿಂಹದ ಹಾದಿ’ ಟೆಲಿಚಿತ್ರದ ಟ್ರೇಲರ್ ಅನ್ನು ಅನಾವರಣಗೊಳಿಸಿ ತಂಡಕ್ಕೆ ಶುಭ ಕೋರಿದರು. ಈಗಾಗಲೇ ‘ಸಿಂಹದ ಹಾದಿ’ ಟೆಲಿಫಿಲಂ ಸುಮಾರು 75ಕ್ಕೂ ಹೆಚ್ಚು ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡಿದೆ.











Edited, Published, Printed by Lalita Kumari (Lalithasri Preetham Rai) Shop N0: 6, Lingamma Towers. Opp. Pandeshwar police station, Pandeshwar Mangaluru 575001. Dakshina Kannada.
All Rights Reserved RNI Ref: 1327299/KARKAN26532. Printed @ N R K Media World, No-10, ‘A’ 1st floor, 4th cross, 4th main, Gandhinagar Bengaluru-560009. email: karavalitharangini@gmail.com PH: +91 9880109212